ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

With Your support we reach
30,000+
HAMPI TIMES epaper readers
ನಿಮ್ಮ ನೆಚ್ಚಿನ ಗ್ರಾಹಕರಿಗೆ ನಿಮ್ಮ ಉತ್ಪನ್ನ ಹಾಗೂ ಸೇವೆಯ ಮಾಹಿತಿ ತಲುಪಿಸಲು ಸಂಪರ್ಕಿಸಿ
PRINT & DIGITAL Advertisement
Valmiki Circle, Hosapete-583201
9448633038
hampitimes@gmail.com
www.hampitimes.com
epaper.hampitimes.com

ಸಂಪುಟ:01	ಸಂಚಿಕೆ:184	ನೋಂದಣಿ ನಂ.:KARKAN27911	ವಿಜಯನಗರ	15.12.2023	ಶುಕ್ರವಾರ	ಪುಟ:04	ಬೆಲೆ:2
Volume:01	Issue:184	Reg.No:KARKAN27911	VIJAYANAGARA	15.12.2023	Friday	Page:04	Rs:2

ಮೈಕ್ರೋ ನ್ಯೂಸ್

ಡಿ.16 ರಂದು ಜೆಸ್ಕಾಂ ಗ್ರಾಹಕರ ಸಂವಾದ ಸಭೆ

ಹಂಪಿ ಟೈಮ್ಸ್ ಹೊಸಪೇಟೆ

ಜೆಸ್ಕಾಂ ನಗರ ಉಪವಿಭಾಗ–1 ಮತ್ತು ಉಪವಿಭಾಗ–2ರ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಗ್ರಾಹಕರ ಸಂವಾದ ಸಭೆಯನ್ನು ಡಿ.16ರಂದು ಆಯೋಜಿಸಲಾಗಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಶನಿವಾರ ನಗರದ ಉಪವಿಭಾಗ–2ರ ಜೆಸ್ಕಾಂ ಕಚೇರಿಯಲ್ಲಿ ಮಧ್ಯಾಹ್ನ 3.30 ರಿಂದ 5 ಗಂಟೆಯವರೆಗೆ ನಡೆಯುವ ಕುಂದುಕೊರತೆ ಸಭೆಯಲ್ಲಿ ವಿದ್ಯುತ್ ಗ್ರಾಹಕರು ಭಾಗವಹಿಸಿ ತಮ್ಮ ಅಹವಾಲು ಸಲ್ಲಿಸಬಹುದು ಎಂದುರು.

ಡಿ.16ರಂದು ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮಕ್ಕಳ ಪ್ರತಿಭಾ ಕಾರಂಜಿ

ಹಂಪಿ ಟೈಮ್ಸ್ ಹೊಸಪೇಟೆ

ಶಾಲಾ ಶಿಕ್ಷಣ ಇಲಾಖೆಯಿಂದ 2023–24ನೇ ಸಾಲಿನ ವಿಜಯನಗರ ಜಿಲ್ಲೆಯ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮಕ್ಕಳ ಜಿಲ್ಲಾ ಮಟ್ಟದ ಪ್ರತಿಭಾಕಾರಂಜಿಯನ್ನು ಡಿ.16ರಂದು ಬೆಳಿಗ್ಗೆ 10.30 ಗಂಟೆಗೆ ಚಿತ್ತವಾಡಗಿಯ ಆಕಾಶ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರಿಗೆ ಜಿಲ್ಲಾ ಮಟ್ಟದ ಸಹ ಪಠ್ಯ ಚಟುವಟಿಕೆಗಳನ್ನು ಡಿ.19ರಂದು ತಾಲ್ಲೂಕಿನ ಮರಿಯಮ್ಮನಹಳ್ಳಿಯ ಪ್ರಾರ್ಥನಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ನಡೆಸಲಾಗುವುದು ಎಂದು ವಿಜಯನಗರ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಯುವರಾಜ ನಾಯ್ಕ ತಿಳಿಸಿದ್ದಾರೆ.

ಕೊಟ್ಟೂರಲ್ಲಿ 2 ದಿನ ಕುಡಿಯುವ ನೀರು ವ್ಯತ್ಯಯ

ಹಂಪಿ ಟೈಮ್ಸ್ ಕೊಟ್ಟೂರು

ಹಗರಿಬೊಮ್ಮನಹಳ್ಳಿ ಮತ್ತು ಕೂಡ್ಲಿಗಿ – ಕೊಟ್ಟೂರು ಪಟ್ಟಣಗಳ ಸಗಟು ನೀರು ಸರಬರಾಜು ಯೋಜನೆಯಡಿ ಕೊಟ್ಟೂರು ಪಟ್ಟಣದ ಶುದ್ಧ ಕುಡಿಯುವ ನೀರಿನ ಏರು ಕೊಳವೆ ಮಾರ್ಗದಲ್ಲಿ ನೀರಿನ ಸೋರಿಕೆ ಕಂಡು ಬಂದಿದ್ದು, ದುರಸ್ಥಿ ಕಾರ್ಯ ಕೈಗೊಳ್ಳುವ ಸಂಬಂಧ ಡಿ. 15 ಮತ್ತು 16 ರಂದು ಕೊಟ್ಟೂರು ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸ ಬೇಕು ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಎ ನಸುರುಲ್ಲಾ ತಿಳಿಸಿದ್ದಾರೆ.

ಹೆಣ್ಣು ಭ್ರೂಣ ಹತ್ಯೆ ನಿಲ್ಲಿಸಿ

ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್ ಆಗ್ರಹ। 1000 ಬಾಲಕರಿಗೆ 760 ಹೆಣ್ಣುಮಕ್ಕಳಿರುವುದು ತುಂಬಾ ಆತಂಕಕಾರಿ

ಹಂಪಿ ಟೈಮ್ಸ್ ಬೆಳಗಾವಿ

ಹೆಣ್ಣು ಭ್ರೂಣಹತ್ಯೆ ಸಾಮಾಜಿಕವಾದ ಪಿಡುಗಾಗಿದ್ದು ಇದನ್ನು ತಡೆಗಟ್ಟುವಲ್ಲಿ ಕಠಿಣವಾದ ಕಾನೂನು ಕ್ರಮಗಳಲ್ಲದೇ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸರ್ಕಾರ ತುರ್ತಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್ ಅವರು ಆಗ್ರಹಿಸಿದ್ದಾರೆ.

ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್ ಅವರ ಪ್ರಶ್ನೆಗೆ ಉತ್ತರಿಸಿದ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು, ಈವರೆಗೆ ದಾಖಲಾಗಿರುವ ಪ್ರಕರಣಗಳಲ್ಲಿ 14 ಆರೋಪಿಗಳನ್ನು ಬಂಧಿಸಿದ್ದು, ಬಂಧಿತರಲ್ಲಿ 13 ಆರೋಪಿಗಳು ಜಾಮೀನು ಪಡೆದಿದ್ದಾರೆ. ಹೆಣ್ಣು ಭ್ರೂಣ ಹತ್ಯೆಯ ಎಲ್ಲಾ ಪ್ರಕರಣಗಳ ತನಿಖೆ ನಡೆದಿದೆ. ತಪ್ಪಿತಸ್ತರ ವಿರುದ್ಧ ಕಾನೂನಾತ್ಮಕವಾಗಿ ಕಠಿಣ ಕ್ರಮಕೈಗೊಳ್ಳಲಾಗುತ್ತದೆ ಎಂದರು.

ಹೆಣ್ಣು ಭ್ರೂಣ ಹತ್ಯೆಯನ್ನು ತಡೆಗಟ್ಟಲಿಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿ ಕಠಿಣವಾದ ಕಾನೂನುಗಳಿವೆ. ಸ್ಕ್ಯಾನಿಂಗ್ ಕೇಂದ್ರಗಳ ಮೇಲೆ ನಿಗಾವಹಿಸಲಿಕ್ಕಾಗಿಯೇ ರಾಜ್ಯಮಟ್ಟದಲ್ಲಿ ಮಂಡಲಿಯನ್ನು ರಚಿಸಲಾಗಿದೆ. ಹಾಸನ

ಜಿಲ್ಲೆಯಲ್ಲಿ ಇತ್ತೀಚೆಗೆ ಬೆಳಕಿಗೆ ಬಂದ ಭ್ರೂಣ ಹತ್ಯೆ ಪ್ರಕರಣದಲ್ಲಿ ಏಳು ಆರೋಪಿಗಳನ್ನು ಬಂಧಿಸಲಾಗಿದ್ದು, ಸಿಐಡಿ ತನಿಖೆಗೆ ಆದೇಶಿಸಲಾಗಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯಮಟ್ಟದಲ್ಲಿ ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರ ಸದಸ್ಯತ್ವದ ಬೋರ್ಡ್ ರಚನೆ ಮಾಡಲಾಗಿದೆ. ಈ ಬೋರ್ಡ್ ಸಮರ್ಪಕವಾಗಿ ಕೆಲಸ ಮಾಡದೇ ಇರುವ ಕಾರಣಕ್ಕಾಗಿಯೇ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಭ್ರೂಣ ಲಿಂಗ ಪತ್ತೆ ಮತ್ತು ಹೆಣ್ಣು ಭ್ರೂಣಗಳ ಹತ್ಯೆ ಪ್ರಕರಣಗಳು ಬಯಲಿಗೆ ಬರುತ್ತಿವೆ. 1000 ಪುರುಷರಿಗೆ 1000 ಮಹಿಳೆಯರು ಇರಬೇಕು ಎನ್ನುವುದು ಸಾಮಾನ್ಯವಾಗಿದ್ದು, ಕೆಲ ಜಿಲ್ಲೆಗಳಲ್ಲಿ ಈ ಅನುಪಾತವು 1000 ಬಾಲಕರಿಗೆ 760 ಹೆಣ್ಣುಮಕ್ಕಳಿರುವುದು ತುಂಬಾ ಆತಂಕಕಾರಿ ವಿಷಯ ಎಂದು ವಿವರಿಸಿದರು.

ಹೆಣ್ಣು ಭ್ರೂಣಗಳ ಹತ್ಯೆಯನ್ನು ನಿಯಂತ್ರಿಸಲು ಪೊಲೀಸ್, ಆರೋಗ್ಯ ಇಲಾಖೆ ಜಂಟಿಯಾಗಿ ಕಾರ್ಯನಿರ್ವಹಿಸಿ ಹೆಣ್ಣು ಭ್ರೂಣ ಹತ್ಯೆಯನ್ನು ನಿಯಂತ್ರಿಸುತ್ತೇವೆ ಎಂದು ಸದನಕ್ಕೆ ಭರವಸೆ ನೀಡಿದರು.

ಸಂಸತ್ತಿಗೆ ನುಗ್ಗಿದ ಕಿಡಿಗೇಡಿಗೆ ಕಠಿಣ ಶಿಕ್ಷೆಗೆ ಗುರಿಪಡಿಸಿ

ಹಂಪಿ ಟೈಮ್ಸ್ ಹೊಸಪೇಟೆ

ಪ್ರಜಾಪ್ರಭುತ್ವದ ದೇಗುಲ ಸಂಸತ್ ಭವನದೊಳಗೆ ನುಗ್ಗಿ, ಸ್ಮೋಕ್ ಕ್ಯಾಂಡಲ್ ಪ್ರಯೋಗಿಸಿದ ಕಿಡಿಗೇಡಿಗಳನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವ ಜತೆಗೆ ಈ ದುಷ್ಕೃತ್ಯಕ್ಕೆ ಕುಮ್ಮಕ್ಕು ನೀಡಿದವರನ್ನೂ ಬಂಧಿಸಬೇಕು ಎಂದು ಎಸ್ಎಫ್ಐ ಒತ್ತಾಯಿಸಿದೆ.

ಭಾರತ ವಿದ್ಯಾರ್ಥಿ ಫೆಡರೇಷನ್ ಹೊಸಪೇಟೆ ತಾಲೂಕು ಸಮಿತಿ ಪ್ರಮುಖರು ಗುರುವಾರ ತಹಸೀಲ್ದಾರ್ ವಿಶ್ವಜೀತ್ ಮೆಹತಾ ಮೂಲಕ ಗೃಹ ಸಚಿವ ಡಾ.ಜಿ.ಪರಮೆಶ್ವರ್‌ಗೆ ಮನವಿ ಸಲ್ಲಿಸಿ, ಲೋಕಸಭೆಯ ಪ್ರೇಕ್ಷಕ ಗ್ಯಾಲರಿಯಿಂದ ಏಕಾಏಕಿ ಸದನಕ್ಕೆ ಧುಮುಕುವ ಮೂಲಕ ಆತಂಕ ಸೃಷ್ಟಿಸಿದ್ದಾರೆ. ಈಗಾಗಲೇ ಆರೋಪಿಗಳನ್ನು ಬಂಧಿಸಲಾಗಿದೆ. ಆದರೆ, ಇದರ ಹಿಂದಿನ ಶಕ್ತಿಗಳನ್ನೂ ಬಯಲಿಗೆಳೆಯಬೇಕು ಎಂದು ಆಗ್ರಹಿಸಿದರು.

ಎಸ್ಎಫ್ಐ ಸಂಘಟನೆ ತ್ಯಾಗ, ಬದ್ಧತೆ ಮತ್ತು ಸಿದ್ಧಾಂತವನ್ನು ಮೈಗೂಡಿಸಿಕೊಂಡು ವಿದ್ಯಾರ್ಥಿಗಳ ಹಿತ, ಶಿಕ್ಷಣ ಮತ್ತು ಸಮಾಜದ ಪ್ರಗತಿಗಾಗಿ, ಸಮಾಜದಲ್ಲಿ ಶಾಂತಿ, ಸೌಹಾರ್ದತೆಗಾಗಿ ದಶಕಗಳಿಂದ ಹೋರಾಡುತ್ತಿದೆ. ಇದನ್ನು ಸಹಿಸದ ಕೆಲ ಪಟ್ಟಭದ್ರರು ಸೈದ್ಧಾಂತಿಕವಾಗಿ ಎದುರಿಸಲಾಗದೇ, ಈ ಪ್ರಕರಣದಲ್ಲಿ ವಿನಾಕಾರಣ ಎಸ್ಎಫ್ಐ ಮೈಸೂರು ಜಿಲ್ಲಾಧ್ಯಕ್ಷ ವಿಜಯ್ ಕುಮಾರ್ ಹೆಸರನ್ನು ಎಳೆದು ತರಲಾಗುತ್ತಿದೆ. ಕೆಲ ಯುವಕರು ಸೋಶಿಯಲ್ ಮೀಡಿಯಾದಲ್ಲಿ ಸುಳ್ಳು ಸುದ್ದಿ ಹಬ್ಬಿಸಿ, ಅಪಪ್ರಚಾರ ಮಾಡುತ್ತಿರುವುದು ಅಕ್ಷಮ್ಯ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಅಂತಹ ವಾಟ್ಸಪ್ ಗ್ರುಪ್‌ಗಳ ಅಡ್ಮಿನ್‌ಗಳ ವಿರುದ್ಧ ಐಟಿ ಸೆಲ್ ದೂರು ದಾಖಲಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ, ಎಸ್ಎಫ್ಐ ರಾಜ್ಯ ಸಮಿತಿ ಸದ್ಯಸರಾದ ಶಿವರೆಡ್ಡಿ, ಜಿಲ್ಲಾ ಮುಖಂಡರಾದ ಪವನ್ ಕುಮಾರ್, ತಾಲೂಕು ಮುಖಂಡರಾದ ಲೋಕೇಶ್, ರೇವತಿ, ಭಾರತ್, ತಿಪ್ಪಮ್ಮ ಮತ್ತು ಇತರರು ಇದ್ದರು.

ರಾಷ್ಟ್ರಕವಿ ಕುವೆಂಪು ಜನ್ಮದಿನಾಚರಣೆ ಲಿಖಿತ ರಸ ಪ್ರಶ್ನೆ ಪರೀಕ್ಷೆ

ಹಂಪಿ ಟೈಮ್ಸ್ ಹೊಸಪೇಟೆ

ಸ್ಥಳೀಯ ಚೇತನ ಸಾಹಿತ್ಯ ಸಂಸ್ಥೆ ಮತ್ತು ವಿಜಯನಗರ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಡಿ.29ರಂದು ರಾಷ್ಟ್ರಕವಿ ಕುವೆಂಪು ಅವರ 120ನೇ ಜನ್ಮ ದಿನಾಚರಣೆಯ ಪೂರ್ವಭಾವಿಯಾಗಿ ಸರ್ಕಾರಿ ಬಾಲಕಿಯರ ಪ.ಪೂ. ಕಾಲೇಜು, ಥಿಯೋಸಫಿಕಲ್ ಪ.ಪೂ. ಕಾಲೇಜು ಮತ್ತು ವಿಜಯನಗರ ಪ.ಪೂ. ಕಾಲೇಜಿನ ವಿದ್ಯಾರ್ಥಿಗಳಿಗೆ ಥಿಯೋಸಫಿಕಲ್ ಕಾಲೇಜಿನಲ್ಲಿ ಡಿ.17 ಭಾನುವಾರ ಬೆ.10ಕ್ಕೆ ಕುವೆಂಪುರವರ ವಿಶ್ವ ಮಾನವ ಸಂದೇಶ ಕುರಿತು ಲಿಖಿತರಸ ಪ್ರಶ್ನೆ ಪರೀಕ್ಷೆಯನ್ನುಏರ್ಪಡಿಸಲಾಗಿದೆ.

ಡಾ.ಬಿ.ಜಿ.ಕನಕೇಶಮೂರ್ತಿರವರು ಸಂಪಾದಿಸಿ ರುವ ವಿಶ್ವಮಾನವ ಕುವೆಂಪು ಎನ್ನುವ ಪುಸ್ತಕದ ಆಧಾರದ ಮೇಲೆ ಐವತ್ತು ಪ್ರಶ್ನೆಗಳನ್ನು ಆಯ್ಕೆ ಮಾಡಿ, ಓ.ಎಂ. ಆರ್. ಶೀಟ್ ಮಾದರಿ ರಸಪ್ರಶ್ನೆ ಪರೀಕ್ಷೆ ನಡೆಯಲಿದೆ. ಪರೀಕ್ಷೆಯಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ, ಪ್ರಥಮ ರೂ.1000/, ದ್ವಿತೀಯ ರೂ.750/– ಹಾಗೂ ತೃತೀಯ ರೂ.500/– ಬಹುಮಾನವನ್ನು ವಿಜಯನಗರ ಕಾಲೇಜಿನ ಸುವರ್ಣ ಭವನದಲ್ಲಿ ಡಿ.29ರಂದು ಬೆ.9ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ವಿತರಿಸಲಾಗುವುದು ಎಂದು ಚೇತನ ಸಾಹಿತ್ಯ ಸಂಸ್ಥೆಯ ಅಧ್ಯಕ್ಷ ಜಂಬುನಾಥ ಹೆಚ್.ಎಂ. ಮತ್ತು ವಿಜಯನಗರ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಧುರಚನ್ನ ಶಾಸ್ತ್ರಿ ಹಿರೇಮಠ ತಿಳಿಸಿದ್ದಾರೆ.

ವಚನ ಅರಿವು

ಸಾಧಕರು ವೀರರು ಧೀರರು

ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯನೇರ ಬಯಸುವರು,
ವೀರರೂ ಅಲ್ಲ, ಧೀರರೂ ಅಲ್ಲ.
ಇದು ಕಾರಣ, ನೆರೆ ಮೂರು ಲೋಕವೆಲ್ಲವೂ
ಹಲ್ಲಣವ ಹೊತ್ತುಕೊಂಡು, ತೊಳಲುತ್ತ ಇದ್ದಾರೆ.
ಗುಹೇಶ್ವರನೆಂಬ ಲಿಂಗವನವರೆತ್ತ ಬಲ್ಲರು?

–ಅಲ್ಲಮಪ್ರಭು

ಜೀವನದಲ್ಲಿ ಸಿಕ್ಕ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳದೆ, ಇನ್ನೊಂದು ಅವಕಾಶವನ್ನು ಕಾಯುವವರು ಕೊಟ್ಟ ಕುದುರೆಯನ್ನು ಹತ್ತಿ ಸವಾರಿ ಮಾಡಲಾರದ ಕೈಲಾಗದವರು. ಸುಮ್ಮನೆ ಒಣ ಲೆಕ್ಕಚಾರದಲ್ಲಿ, ಆಸೆಪಡುತ್ತ ಒದ್ದಾಡುತ್ತಿರುತ್ತಾರೆ. ಇಂತಹವರು ಗುರಿ ತಲುಪುವುದಿಲ್ಲ. ದುರಾಚಾರದ ಮನಸ್ಥಿತಿಗೆ ಕಡಿವಾಣ ಹಾಕಿ, ಸಿಕ್ಕ ಒಂದು ಜೀವನವನ್ನು ಪ್ರಾಮಾಣಿಕವಾಗಿ ಬದುಕಿ ಸಾರ್ಥಕತೆ ಪಡೆಯಬೇಕು. ಇನ್ನೊಂದು ಜೀವನ ಅಥವ ಆಯುಷ್ಯ ಕೊನೆಗೊಳ್ಳುವ ಕಾಲದಲ್ಲಿ ಒಳ್ಳೆಯವರಾಗುವ ಹುಸಿತನ ಬೇಡ. ಇನ್ನೂ ಶರಣತತ್ವದಲ್ಲಿ ಇಚ್ಛೆಯುಳ್ಳ ಯಾರು ಬೇಕಾದರು ಜಾತಿ, ಕುಲ, ಮತವಿಲ್ಲದೆ ಲಿಂಗವನ್ನು ಧರಿಸಬಹುದು. ಲಿಂಗಧರಿಸಿದವರು ತಮ್ಮ ಇಷ್ಟಲಿಂಗವನ್ನೆ ನಂಬಿ ಪೂಜಿಸಬೇಕು. ಅರಿವು ದೊರೆತು ತಾನೆ ದೈವವಾಗುವವರೆಗಿನ ಸಾಧನೆಯ ಹಂತಗಳು ಶರಣತತ್ವ, ವಿಚಾರಗಳಲ್ಲಿವೆ. ಲಿಂಗವಿಡಿದು ಸಾಧನೆ ಮಾಡಬೇಕು. ಅದನ್ನು ಬಿಟ್ಟು ಬೇರೆ ದೇವರುಗಳಿಗೆ ನಡೆದುಕೊಳ್ಳುವವರು ವೀರರೂ ಅಲ್ಲ, ಧೀರರೂ ಅಲ್ಲ. ಬರಿ ಪೂಜೆ, ಪುನಸ್ಕಾರ, ವ್ರತ ಮುಂತಾದ ಆಚರಣೆಗಳನ್ನು ಮಾಡುತ್ತ ಬಳಲುತ್ತಾರೆ. ಇವರಾರು ಲಿಂಗವೆಂಬ ಕುರುಹಿನಿಂದ ಅರಿವನ್ನು ಕಾಣದೆ, ಅರಿವಿನಿಂದ ಶಿವನನ್ನು ಅರಿಯಲಾರದೆ ಕಾಲಕಳೆಯುತ್ತಾರೆ. ನಿಷ್ಠೆ, ಶ್ರಮ, ತಾಳ್ಮೆಯಿಂದ ಕರಲಿಂಗವನ್ನು ನಂಬಿದರೆ ಕೊಟ್ಟ ಕುದುರೆಯೆಂಬ ಜೀವನವನ್ನು ಸವಾರಿ ಮಾಡಬಹುದು ಎನ್ನುತ್ತಾನೆ ಅಲ್ಲಮಪ್ರಭು.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com

ಚಹವಿನಾ ತೃಣಮಪಿ ನಚಲತಿ

ಮುಂದುವರೆದ ಭಾಗ

ಚಹಕ್ಕೂ ಅಧ್ಯಾತ್ಮಕ್ಕೂ ಸಂಬಂಧವಿದೆ. ಚಹ ಕುಡಿದೇ ಬದುಕಿದ್ದ ಸಂತನೊಬ್ಬನ ಆಶ್ರಮ ನೋಡಲು ಪಾಂಡವಪುರ ತಾಲೂಕಿಗೆ ಹೋಗಿದ್ದೆ. ಚಹ–ಕಾಫಿಗಳಿಗೆ ಸಾಧಕರನ್ನು ಸಮಾಧಿ ಸ್ಥಿತಿಗೆ ಕರೆದೊಯ್ಯುವ ಶಕ್ತಿಯಿದೆ. ಸೂಫಿಗಳು ಭಾರತಕ್ಕೆ ಕಾಫಿ ಬೀಜವನ್ನು ತಂದರು. ಕಾಫಿಬೀಜ ತಿನ್ನುತ್ತ ಅವರು ಪಾರಲೌಕಿಕ ಅನುಭವ ಪಡೆಯುತ್ತಿದ್ದರು. ಅವರು ಚಹವನ್ನು ತಮ್ಮ ಪಂಥದ ಅಧಿಕೃತ ಪಾನೀಯ ಮಾಡಲಿಲ್ಲ. ಮಾಡಿದ್ದರೆ, ಸೂಫಿ ಪಂಥ ಇನ್ನೂ ಪ್ರವರ್ಧಮಾನಕ್ಕೆ ಏರುತ್ತಿತ್ತು. ಈಗಲೂ ದರ್ಗಾಗಳಲ್ಲಿ ಖವಾಲಿ ಹಾಡುವವರು ನಡುನಡುವೆ ಚಹ ಕುಡಿಯುವುದುಂಟು. ಚಹ ಕುಡಿದರೆ ನಿದ್ದೆ ಸುಳಿಯುವುದಿಲ್ಲ. ಜಗತ್ತಿನಲ್ಲಿ ಪರೀಕ್ಷೆಗಳಿಗಾಗಿ ಓದಿ ವಿಜೇತರಾದವರನ್ನು ಕೇಳಿ ನೋಡಿ– ನಿಮ್ಮ ಯಶಸ್ಸಿನ ಗುಟ್ಟೇನೆಂದು. ಟಿ ಎಂಬ ಒಂದಕ್ಷರದ ಉತ್ತರ ಕೊಡುತ್ತಾರೆ. ಭಾರತದ ಕಲೆಗೂ ಚಹಕ್ಕೂ ಕರುಳಬಳ್ಳಿಯ ಸಂಬಂಧವಿದೆ. ಶಿವರಾತ್ರಿಯಲ್ಲಿ ರಾತ್ರಿಯೆಲ್ಲ ಭಜನೆ ಮಾಡುವವರಿಗೆ ನಡುನಡುವೆ ಚಹ ಬೇಕು. ಪೈಗಂಬರ್ ಅವರ ಜೀವನಕಥೆ ಓದುವವರು, ಪುರಾಣ ಓದುವವರು, ನಾಟಕದವರು, ಯಕ್ಷಗಾನದವರು ಚಹ ಕೇಳುತ್ತಾರೆ. ಹಿಂದಿ ಸಿನಿಮಾ ಹಾಡುಗಳು ಹುಟ್ಟಿದ್ದೇ ರೆಕಾರ್ಡಿಂಗ್ ರೂಮಿನ ಚಹಪಾನದಿಂದ. ಬರೆಹಗಾರರಿಗಂತೂ ಚಹವೇ ಇಂಧನ. ನಾನೊಮ್ಮೆ ಯಶವಂತ ಚಿತ್ತಾಲರಿಗೆ ಅವರ ಬರೆಹದ ಕ್ರಮವನ್ನು ಕೇಳಿದೆ. ಅವರು 'ನಾನು ಬೆಳಿಗ್ಗೆ ಎದ್ದು ಚಹ ಮಾಡಿಕೊಂಡು ಕುಡಿದು ಸಮುದ್ರವನ್ನು ನೋಡುತ್ತ ಈ ಕುರ್ಚಿಯಲ್ಲಿ ಕೂತು ಬರೆಯುತ್ತೇನೆ' ಎಂದರು. ಸಂಜೆ ಅವರ ಮನೆಯಿಂದ ಅರಬ್ಬೀ ಸಮುದ್ರವೇ ಚಹದ ಬಣ್ಣಕ್ಕೆ ತಿರುಗುತ್ತದೆ. ಚಹವಿಲ್ಲದೆ ಹೋಗಿದ್ದರೆ ಭಾರತದ ಅಮೂಲ್ಯ ಕಲಾಕೃತಿಗಳು ಹುಟ್ಟುತ್ತಲಿರಲಿಲ್ಲ. ಮೈಸೂರಿನಲ್ಲಿ ಕಾಫಿಹೌಸ್ ಎಂಬ ಚಿಕ್ಕ ಹೋಟೆಲಿನಲ್ಲಿ ಅಡಿಗರ ನೇತೃತ್ವದಲ್ಲಿ ಯುವಲೇಖಕರು ಸೇರುತ್ತಿದ್ದರೆಂದೂ, ಅಲ್ಲಿನ ಚರ್ಚೆ ನವ್ಯಸಾಹಿತ್ಯದ ಹುಟ್ಟಿಗೆ ಕಾರಣವಾಯಿತೆಂದೂ ಹೇಳುವರು. ಒಂದೊಮ್ಮೆ ಈ ಲೇಖಕರು ಟೀಹೌಸಿನಲ್ಲಿ ಚರ್ಚೆ ಮಾಡಿದ್ದರೆ ನವ್ಯಪಂಥವು ಇನ್ನಷ್ಟು ಕಾಲ ಬದುಕಿರುತ್ತಿತ್ತು ಅನಿಸುತ್ತದೆ. ಬಹುತ್ವದ ಇನ್ನೊಂದು ಹೆಸರು ಚಹ. ಕಾಫಿಗಿಲ್ಲದಷ್ಟು ಬಹುರೂಪಿ ಚಹರೆಗಳು ಚಹಕ್ಕಿವೆ. ನಿಂಬೆ ಚಹ, ಪುದಿನ ಚಹ, ಮಸಾಲಾ ಚಹ, ಏಲಕ್ಕಿಚಹ, ಕಟ್ಟಂಚಹ ಒಂದೇ ಎರಡೇ. ಅಮ್ಮ ಬಾಲ್ಯದಲ್ಲಿ ದಾಳಿಂಬೆ ಎಲೆ, ಹೊನ್ನವರೆ ಹೂವು, ಗುಲಗಂಜಿ ಸೊಪ್ಪು ಹಾಕಿ ಚಹ ಮಾಡುತ್ತಿದ್ದಳು. ನಮಗೆ ಬೇಧಿಯಾದರೆ ಬ್ರಾಂಡಿಯಂತೆ ಕಹಿಯಾಗಿದ್ದ ಕಪ್ಪನೆ ಚಹ ಕೊಡುತ್ತಿದ್ದಳು. ಆಹಾರ ಲೋಕದ ಏಕರೂಪತೆ ಮುರಿಯಲು ಹಲವು ಪ್ರಯೋಗಗಳನ್ನು ಮಾಡಲಾಗಿದೆ. ಇವು ಚಹದ ಕ್ಷೇತ್ರದಲ್ಲೇ ಹೆಚ್ಚು ನಡೆದಿವೆ. ಸಂಗೀತದಲ್ಲಿ ಒಂದೇ ರಾಗ ಮಿಶ್ರವಾಗಿ ಒಡೆದು ಹಲವಾಗಿ ಹಲವು ರಾಗಗಳು ಹುಟ್ಟುವಂತೆ, ಸಹಸ್ರಾರು ಚಹದ ಮಾದರಿಗಳು ಹುಟ್ಟಿಕೊಂಡಿವೆ. ನಾವು ಹತ್ತಾರು ತರಹ ಚಹಗಳನ್ನು ಟರ್ಕಿಯಲ್ಲಿ ಕುಡಿದೆವು. ಅದರಲ್ಲಿ ಗುಲಾಬಿ ಪಕಳೆ ಹಾಕಿದ ಚಹ ಅಮೋಘವಾಗಿತ್ತು. ಇರಾನಿನಲ್ಲಿ ಚಹವು ಒಂದು ಸಂಸ್ಕೃತಿಯಾಗಿ ಮಾರ್ಪಟ್ಟಿದೆ. ಅಲ್ಲಿನ ಧಾರ್ಮಿಕ ಸ್ಥಳಗಳಲ್ಲಿ ಬಂದವರಿಗೆ ಉಚಿತ ಚಹದ ಸೇವೆಯಿದೆ. ಇರಾನಿನಿಂದ ವಲಸೆ ಬಂದವರು ಮುಂಬೈನಲ್ಲಿ ಇರಾಣಿ ಚಹವನ್ನು ಜನಪ್ರಿಯಗೊಳಿಸಿದ್ದು ನಮಗೆ ಗೊತ್ತೇಯಿದೆ. ನಾನು ಸಕ್ಕರೆಯಿಲ್ಲದ ಗ್ರೀನ್ಟೀಯ ಅಭ್ಯಾಸ ಇಟ್ಟುಕೊಂಡಿದ್ದೇನೆ. ಇದರಷ್ಟು ಸುಲಭ ತಯಾರಿಕೆಯ ಪಾನೀಯ ಇನ್ನೊಂದಿಲ್ಲ. ನೀರು ಕುದಿಸುವುದು. ಅದರೊಳಗೆ ಟೀಧೂಳಿನ ಬ್ಯಾಗನ್ನು ಇಳಿಬಿಟ್ಟು ಮೂರು ನಿಮಿಷದ ಬಳಿಕ ಕುಡಿಯುವುದು. ಹೌದು, ಚಹಕ್ಕೆ ಡಸ್ಟ್ ಎಂದೂ ಕರೆಯುತ್ತಾರೆ. ಚಹಲೋಕದಲ್ಲಿ ಧೂಳಿಗೂ ಬೆಲೆಯಿದೆ. ನನ್ನ ಗ್ರೀನ್ಟಿ ವ್ಯಸನವನ್ನು ತಡೆಯಲು ನನ್ನ ಮಿತ್ರರೊಬ್ಬರು, ಚಹದ ಫ್ಯಾಕ್ಟರಿಯಲ್ಲಿ ಹಾರುವ ಧೂಳನ್ನು ಕಸದಂತೆ ಗುಡಿಸಿ, ಜರಡಿಹಿಡಿದು, ಚಂದದ ಬ್ಯಾಗುಗಳಲ್ಲಿ ತುಂಬುತ್ತಾರೆ ಎಂದು ಹೇಳಿದರು. ಆದರೂ ಚಹದ ವಿಷಯದಲ್ಲಿ ನನಗೆ ತಿರಸ್ಕಾರ ಮೂಡಿಲ್ಲ. ಕಾರಣ, ಅಣುರೇಣು ತೃಣಕಾಷ್ಠಗಳಲ್ಲಿ ಪರಮಾತ್ಮನ ಚೈತನ್ಯವಿರುವಂತೆ, ಎಲೆಯ ಹುಡಿಯಲ್ಲಿ ಜೀವಾತ್ಮನ ಚೈತನ್ಯವಿದೆ. ಎಲ್ಲ ಊರಲ್ಲೂ ಶ್ರೇಷ್ಠ ಚಹ ಮಾಡುವುದಕ್ಕೆ ಖ್ಯಾತವಾದ ಹೋಟೆಲುಗಳಿವೆ. ಆದರೆ ಈ ವಿಷಯದಲ್ಲಿ ಬೀದಿಬದಿಯ ಡಬ್ಬಾ ಹೋಟೆಲು ಕಮ್ಮಿಯಿಲ್ಲ. ಯಾಕೊ ಕೇರಳದ ಕಟ್ಟಂಚಾಯ್ ನನಗೆ ಹಿಡಿಸಿಲ್ಲ. ಗಟ್ಟಿಯಾದ ಹಾಲಿನಲ್ಲಿ ಟೀಸೊಪ್ಪನ್ನು ಕುದಿಸುವ ಏಲಕ್ಕಿ ಪುಡಿಹಾಕಿ ಕೆನೆಗಟ್ಟದಂತೆ ಕೆಳಗೆ ಮೇಲೆ ಮಾಡಿಕೊಡುವ ಚಹ ಇಷ್ಟ. ಯಾರೊ ಗೆಳೆಯರು ಕಲಬುರ್ಗಿಗೆ ಹೋದರೆ ಕಲ್ಯಾಣ ಕರ್ನಾಟಕ ಟೀಸ್ಟಾಲಿನಲ್ಲಿ ಟೀ ಕುಡಿಯಬೇಕೆಂದು ತಾಕೀತು ಮಾಡಿದ್ದುಂಟು. ಬಸ್ಸಿಳಿದವನೇ ಚಹದಂಗಡಿಗೆ ಹೋದೆ. ಪಿಂಗಾಣಿಯ ಸಾಸರು ಕಪ್ಪಿನಲ್ಲಿ ತೆಳುಗುಲಾಬಿ ಬಣ್ಣದ, ಮಸಾರಿ ನೆಲದಲ್ಲಿ ಹರಿದ ಹೊಸಮಳೆನೀರಿನ ಬಣ್ಣದ ಅದ್ಭುತ



ರಹಮತ್ ತರೀಕೆರೆ
ಸಂಸ್ಕೃತಿ ಚಿಂತಕರು

ಚಹ. ಗಡಗಡ ನಡುಗುತ್ತ ಜನ ಪಾಳಿಯಲ್ಲಿ ಕಾಯುತ್ತಿದ್ದರು. ಒಂದೇ ನಿಲುವಿನಲ್ಲಿ ಮೂರು ನಾಲ್ಕು ಬಸಿ ಕುಡಿಯುತ್ತಿದ್ದರು. ಊರಿಗೆ ಹೊಸಬನಾದ ನನಗೆ ಆತ ಚೀನಿ ಬಟ್ಟಲಿನಲ್ಲಿ ಚಹ ಕೊಟ್ಟ. ಅಮೋಘ ರುಚಿ.

ಹಿಮಾಲಯದ ಬದರಿನಾಥ್ ಸಮೀಪದ ಮಾನಾ ಎಂಬ ಹಳ್ಳಿಯಲ್ಲಿ ಟೀಕುಡಿದ ನೆನಪಾಗುತ್ತಿದೆ. ಅದರ ಹೆಸರೇ ಭಾರತದ ಕಟ್ಟಕಡೆಯ ಟೀಸ್ಟಾಲ್. ಸಿಕ್ಕಾಪಟ್ಟೆ ಸಕ್ಕರೆ ಹಾಕಿದ್ದರಿಂದ ನನಗೆ ಚಹ ಹಿಡಿಸಲಿಲ್ಲ. ಒಳ್ಳೆಯ ಚಹ ಮಾಡುವುದೊಂದು ಕಲೆ. ಅದರಲ್ಲಿ ಹಾಲು ಸಕ್ಕರೆ ಚಹಪುಡಿ ಎಷ್ಟಿರಬೇಕೆಂಬ ಪ್ರಮಾಣಜ್ಞಾನ ಬೇಕು. ಎಷ್ಟು ಕುದಿಸಬೇಕು, ಯಾವಾಗ ಏನನ್ನು ಸೇರಿಸಬೇಕು ಎಂಬ ಹದವನ್ನು ಕೆಲವರಷ್ಟೆ ಕಂಡುಕೊಂಡಿದ್ದಾರೆ. ಅಪ್ಪನಿಗೆ ಕೆಟ್ಟಚಹ ಕೊಟ್ಟರೆ ಕೊಟ್ಟವರ ಎದುರೇ ಚೆಲ್ಲಿಬಿಡುತ್ತಿದ್ದನು. ಲೇಖಕ ಜಿ. ರಾಜಶೇಖರ ಅವರ ಸಂದರ್ಶನ ಮಾಡುವಾಗ, ಅವರು 'ನಮ್ಮ ಮನೆಯಲ್ಲಿ ಯಾರಿಗೂ ಒಳ್ಳೆಯ ಚಹ ಮಾಡಲು ಬರುವುದಿಲ್ಲ ಕಂಡ್ರಿ. ನಾನೇ ಮಾಡಬೇಕು' ಎಂದು ಎದ್ದುಹೋಗಿ ಚಹ ಮಾಡುತ್ತಿದ್ದರು. ಮಡದಿಯರು ಗಂಡನನ್ನು ಪುಸಲಾಯಿಸಿ ನಿಮಗೆ ಮಾತ್ರ ಈ ಅಪೂರ್ವ ಕಲೆಯಿದೆ ಎಂದು ಪಾಪದ ಲೇಖಕನಿಂದ ಕೆಲಸ ತೆಗೆಸುತ್ತಿದ್ದರು. ಹಳೆಯ ಕನ್ನಡ ಸಿನಿಮಾಗಳಲ್ಲಿ ಮಡದಿಯರು ಜಳಕ ಮಾಡಿ, ಒದ್ದೆಕೂದಲಲ್ಲಿ ಬಂದು ಹಾಸಿಗೆಯಲ್ಲಿರುವ ಪತಿಗೆ ಕಾಫಿ ತಂದುಕೊಡುವ ದೃಶ್ಯಗಳಿವೆ. ಆದರೆ ಚಹದಲ್ಲಿ ಗಂಡ–ಹೆಂಡತಿಗೆ ಭೇದವಿಲ್ಲ. ಒಬ್ಬರಿಗೊಬ್ಬರು ಚಹ ಮಾಡಿ ಕೊಡುವರು. ಚಹ ಸಮಾನತಾವಾದಿ.

ನಾನು ಸಾಮಾನ್ಯವಾಗಿ ಕೆಟಲುಗಳಲ್ಲಿ ಮಾರಿಕೊಂಡು ಬರುವ ಚಹ ಕುಡಿಯುವುದಿಲ್ಲ. ಅದು ಕಡಿಮೆ ಗುಣಮಟ್ಟದ ಸೊಪ್ಪಿನಿಂದ ಮಾಡಿದ್ದು. ಅದು ಶಾವಿಗೆ ಹಾಕಿದರೆ ಪಾಯಸವಾಗುತ್ತದೆ. ರೈಲುಡಬ್ಬಿಯಲ್ಲಿ ಬರುವ ಚಹದ್ದೂ ಇದೇ ಸಮಸ್ಯೆ. ಡಯಾಬಿಟೀಸ್ ಇದ್ದವರಿಗೆ ಸಕ್ಕರೆಇಲ್ಲದ ಚಹ ಕೊಡುವ ವ್ಯವಸ್ಥೆಯೇ ನಮ್ಮ ಮೀಟಿಂಗು ರೈಲು ಸಮ್ಮೇಳನಗಳಲ್ಲಿಲ್ಲ. ನನ್ನ ಪ್ರಕಾರ ಚಹ ಕುಡುಕರಿಗೆ ತಮಗೆ ಬೇಕಾದಂತೆ ಸಕ್ಕರೆ ಹಾಕಿಕೊಳ್ಳಲು ಸ್ವಾತಂತ್ರ್ಯವಿರಬೇಕು. ನಾನು ರೈಲು ಪಯಣದಲ್ಲಿ ಚಹ ಕುಡಿಯದಿದ್ದರೂ ಚಹ ಮಾರುವವರ ವಿವಿಧ ಕೂಗು ನನಗೆ ಹಿಡಿಸುತ್ತದೆ. ಬೆಳಗಿನ ಜಾವ ಇನ್ನೂ ಗಾಢ ನಿದ್ದೆಯಲ್ಲಿರುವಾಗ, ಮನದನ್ನೆ ಕಿವಿಯೊಳಗೆ ಪಿಸುಗುಟ್ಟಿ ಏಳಿ ಬೆಳಗಾಯಿತು ಎಂದಂತೆ, ಚಾಯ್ಚಾಯ್, ಹ್ಲಾ ಮಸಾಲಚಾಹ್, ಗರಂಗರಂ ಚಾಯ್ ಕೂಗು ಕೇಳಿಸುತ್ತದೆ. ನಿದ್ದೆಗೆಡಿಸದೆ ಚಹವೆಂಬ ಶಬ್ದ ಪಯಣಿಗರ ಕರ್ಣಪಟಲವನ್ನು ತಾಕಿ, ಮೆದುಳಿಗೆ ಮುಟ್ಟಬೇಕು ಎಂಬ ಇರಾದೆಯಿಂದ ಎಷ್ಟುಬೇಕಷ್ಟೊ ಸ್ವರಭಾರ ಹಾಕಿದ ಮಧುರ ಉಲಿ. ಚಹ ಒಂಟಿಯಲ್ಲ. ಅದರ ಜತೆ ತಿನಿಸುಗಳ ಸಂಬಂಧವಿದೆ. ಸರ್ಕಾರಿ ಮೀಟಿಂಗುಗಳಲ್ಲಿ ಮಾರಿಗೋಲ್ಡು ಬಿಸ್ಕತ್ತು ಅದರ ಸಂಗಾತಿ. ಬಳ್ಳಾರಿ ಸೀಮೆಯಲ್ಲಿ ಮಿರ್ಚಿ. ನಮ್ಮ ಅಜ್ಜಿಯೊಬ್ಬರು ಬೆಳಿಗ್ಗೆಯೇ ದೊಡ್ಡ ಬನ್ನನ್ನು ಚಹದೊಳಗೆ ಅದ್ದಿ ತಿನ್ನುತ್ತಿದ್ದರು. ನಾವು ಬಾಲ್ಯದಲ್ಲಿ ಮಂಡಕ್ಕಿ ಹಾಕಿಕೊಂಡು, ಬಾಯೊಳಗೆ ಬರುತ್ತಿದ್ದ ಚಹದಲ್ಲಿ ನೆಂದ ಕಾಳನ್ನು ತಿನ್ನುತ್ತ ಎಂಜಾಯ್ ಮಾಡುತ್ತಿದ್ದೆವು. ಕರಾವಳಿಯಲ್ಲಿ ಬೆಳಿಗ್ಗೆಯೇ ಚಹದ ಜತೆ ಬಾಳೆಹಣ್ಣಿನಿಂದ ಮಾಡುವ ಸಿಹಿಬನ್ ಅಥವಾ ದಿವಿ ಹಲಸಿನ ಪೋಡಿ ತಿನ್ನುವ ಅಭ್ಯಾಸವಿದೆ. ಮಸಾಲೆ ದೋಸೆ ತಿಂದಮೇಲೆ ಕಾಫಿ ಕುಡಿಯದಿದ್ದರೆ ಅವರು ನಾಗರಿಕರಲ್ಲ ಎಂಬ ಭಾವ ಮೈಸೂರು ಬೆಂಗಳೂರಲ್ಲಿದೆ. ಬಿರಿಯಾನಿ ಬಳಿಕ ಚಹ ಕುಡಿಯದೇ ಹೋದರೆ ಸುಸಂಸ್ಕೃತರಲ್ಲ ಎಂಬ ಭಾವ ಮುಸ್ಲಿಮರಲ್ಲಿದೆ. ಉತ್ತರ ಕರ್ನಾಟಕದಲ್ಲಿ ಚಹದ ಸಂಗಾತಿ ಚೂಡ. ಬೇಂದ್ರೆ 'ಚಹಾದ ಜೋಡಿ ಚೂಡಧಾಂಗ' ಎಂದರು. ಕಾಫಿ ಜತೆಗೆ ಕಾರದ್ಹಾಂಗ ಎನ್ನಲಿಲ್ಲ. ಕರ್ನಾಟಕ ಏಕೀಕರಣವಾದರೂ ಅದರೊಳಗೆ ಸಾಂಸ್ಕೃತಿಕ ವಿಭಜನೆ ಇದೆ. ಜೋಳದ ರೊಟ್ಟಿ–ರಾಗಿಮುದ್ದೆ ಆಧಾರದಲ್ಲಿ ಇದನ್ನು ಉತ್ತರ ಮತ್ತು ದಕ್ಷಿಣ ಕರ್ನಾಟಕ ಎಂದು ವಿಭಜಿಸಬಹುದು. ಇದರಂತೆ ಚಹ ಮತ್ತು ಕಾಫಿಗಳ ಆಧಾರದಲ್ಲೂ ವಿಭಜಿಸಬಹುದು. ತುಂಗಭದ್ರೆಯ ಉತ್ತರಕ್ಕೆ ಚಹದ ನಾಡು. ದಕ್ಷಿಣಕ್ಕೆ ಕಾಫಿಯ ನಾಡು. ಚಿಕ್ಕಮಗಳೂರು ಜಿಲ್ಲೆಯ ನಾವು ಕಾಫಿ ಬೆಳೆಯುತ್ತಿದ್ದರೂ ಕುಡಿಯುತ್ತಿದ್ದುದು ಟೀ ಮಾತ್ರ. ಸಾಬರ ಮನೆಗಳಲ್ಲಿ ಕಾಫಿಯಿಲ್ಲ. ಕಾಫಿ ಬ್ರಾಹ್ಮಣರದು– ಚಹ ಬ್ರಾಹ್ಮಣೇತರರದು ಎಂದು ಸಹ ವಿಂಗಡಣೆಯಾದಂತಿದೆ. ಚಹವು ವ್ಯಾಪಾರಿ ಸಂಸ್ಕೃತಿಯ ಭಾಗವಾಗಿದೆ. ಬಟ್ಟೆಯಂಗಡಿಗೆ ಹೋದರೆ ಗಿರಾಕಿಗಳನ್ನು ಕೂರಿಸಿ ಚಹ ಕೊಡುತ್ತಾರೆ. ಚಹದ ಋಣಭಾರ ಖರೀದಿಯಿಲ್ಲದೆ ಏಳುವುದಕ್ಕೆ ಗಿರಾಕಿಗಳಿಗೆ ಕೊಡುವುದಿಲ್ಲ. ಅಂಗಡಿಯವರು ಇದೇ ಹೊತ್ತಲ್ಲಿ ದುಬಾರಿ ಬೆಲೆ ವಿಧಿಸಿದರೂ ಗೊತ್ತಾಗುವುದಿಲ್ಲ. ಚಹಕ್ಕೆ ಮೋಸ ಮಾಡುವ ಗುಣವಿರುವಂತೆ, ಪ್ರಜಾಪ್ರಭುತ್ವದ ಗುಣವೂ ಇದೆ. ಟೀಪಾರ್ಟಿಗಳು ಸಂವಾದಕ್ಕೆ ಆಹ್ವಾನ ನೀಡುವ ವೇದಿಕೆ. ಜೆರುಸಲೇಮಿನಲ್ಲಿ ಪ್ಯಾಲಸ್ತೈನಿನ ರಾಜಕೀಯ ಸಮಸ್ಯೆಯ ಚರ್ಚೆಗೆ ಚಹ ಕುಡಿಯುತ್ತ ಚರ್ಚೆ ಮಾಡಲು ಆಹ್ವಾನಿಸುವ ಬೋರ್ಡನ್ನು ನೋಡಿದ್ದು ನೆನಪಾಗುತ್ತಿದೆ. ಚಹ ಕುಡಿಯುತ್ತ ದೇಶದ ರಾಜಕಾರಣ ಬದಲಿಸುವ ಆಲೋಚನೆಗಳು ಹುಟ್ಟುತ್ತವೆ. ಎಂತಲೇ ಮಂತ್ರಾಲೋಚನ ಸಭೆಗಳಲ್ಲಿ ಕಾ

ಕವಿ ಮನಸು

ಗುಟ್ಟು

ದಾಂಪತ್ಯದ ಸುವರ್ಣ ಮಹೋತ್ಸವ
ಆಚರಿಸಿಕೊಂಡ ದಂಪತಿಗಳಿಗೆ
ಮೊಮ್ಮಕ್ಕಳು ಕೇಳಿದರು
ಇಷ್ಟು ವರ್ಷದ ಸುಖಮಯ ದಾಂಪತ್ಯದ
ಗುಟ್ಟೇನು ಎಂದು??

ಪರಸ್ಪರ ಮುಖ ನೋಡಿ ನಕ್ಕು
ನಾನವಳ ಗೆಲ್ಲಿಸಬಯಸಿದೆ
ಅವಳು ನನ್ನ ಸೋಲಗೊಡಲಿಲ್ಲ
ಪ್ರೀತಿಯಿಂದ ಸವಿದೆವು ಬಾಳ ಬುತ್ತಿಯ
ಜೊತೆಯಾಗಿ ಸಾಗಿದೆವು ಬಾಳ ಬಟ್ಟೆಯಲಿ
ಪರಸ್ಪರ ಕೊಟ್ಟು ಪಡೆದೆವು ಗೌರವಾದರ
ಒಬ್ಬರಿಗೊಬ್ಬರು ಸೋತೆವು
ಆದ್ದರಿಂದಲೇ ಬದುಕಿನಲ್ಲಿ ಗೆದ್ದೆವು
ಎಂದು ಉತ್ತರವಿತ್ತರು ಆ ದಂಪತಿಗಳು

– **ವೀಣಾ ಹೇಮಂತ್ ಗೌಡ ಪಾಟೀಲ್** ಮುಂಡರಗಿ, ಗದಗ್

ಒಲವೇ ನಮ್ಮ ಬದುಕು

ಸೌಂದರ್ಯಕ್ಕೆ ಒಡವೆ ಅಂದ,
ಸಂಸಾರಕ್ಕೆ ಒಲವೇ ಚೆಂದ,
ಒಡವೆಯ ಬಣ್ಣ ಮಾಸಿದರೆ ಕಳೆಯೇ ಇಲ್ಲ
,
ಒಲವಿಲ್ಲದೆ ಜೀವನಕ್ಕೆ ಬೆಲೆಯೇ ಇಲ್ಲ.
ಏಕೆಂದರೆ?
ಒಲವೇ ನಮ್ಮ ಬದುಕು.

– **ಮಂಜುಶ್ರೀ ಮುರಳೀಧರ್.**
ತೋರಣಗಲ್ಲು, ಬಳ್ಳಾರಿ.

PLACE YOUR ADVT.
HOUSE RENT / SALE / LEASE, CHANGE OF NAME, OBITUARY, Public Notice & EVENT COVERAGE
Contact
9448633038
Near Valmiki Circle, HOSAPETE-583201
Email:hampitimes@gmail.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ತುಂಗಭದ್ರಾ ನೀರಿನ ಮಟ್ಟ

ಗುರುವಾರ : 14-12-2023

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1591.00 ಅಡಿ
ಒಳ ಹರಿವು	434 ಕ್ಯುಸೆಕ್
ಹೊರ ಹರಿವು	976 ಕ್ಯುಸೆಕ್
ಇಂದಿನ ಸಾಮರ್ಥ್ಯ	11.885 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ

ಕಳೆದ ವರ್ಷ ಇದೇ ದಿನ

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1627.85 ಅಡಿ
ಒಳ ಹರಿವು	997 ಕ್ಯುಸೆಕ್
ಹೊರ ಹರಿವು	6534 ಕ್ಯುಸೆಕ್
ಸಾಮರ್ಥ್ಯ	86.204 ಟಿಎಂಸಿ

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

ಸ್ಪರ್ಧಾತ್ಮಕ ಪರೀಕ್ಷೆ ಅಚ್ಚುಕಟ್ಟಾಗಿರಲಿ

ಎಡಿಸಿ ಡಾ.ಕೆ.ಆರ್ ದುರುಗೇಶ ಹೇಳಿಕೆ। ಪಾರದರ್ಶಕ, ನಿಯಮಾನುಸಾರ ಪರೀಕ್ಷೆಗಳನ್ನು ನಡೆಸಲಿ

■ **ಹಂಪಿ ಟೈಮ್ಸ್ ರಾಯಚೂರು**

ಡಿ.14ಮತ್ತು 17ರಂದು ನಗರದಲ್ಲಿ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಕಿರಿಯ ಲೆಕ್ಕ ಸಹಾಯಕರು ಗ್ರೂಪ್ ಸಿ ಹುದ್ದೆಗಳಿಗೆ ನಡೆಯುತ್ತಿರುವ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಅಚ್ಚುಕಟ್ಟಾಗಿ ಹಾಗೂ ಯಾವುದೇ ಲೋಪ ದೋಷಗಳಾಗದಂತೆ ನಿಯಮಾನುಸಾರವಾಗಿ ನಡೆಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಕೆ.ಆರ್ ದುರುಗೇಶ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅವರು ಡಿ.14ರ(ಗುರುವಾರ) ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಕಿರಿಯ ಲೆಕ್ಕ ಸಹಾಯಕರು, ಗ್ರೂಪ್ ಸಿ ಹುದ್ದೆಗಳಿಗೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ದತೆಗಳ ಕುರಿತು ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಡಿ.16ರಂದು ರಾಯಚೂರು ತಾಲೂಕು ವ್ಯಾಪ್ತಿಯ ಒಂದು ಪರೀಕ್ಷಾ ಕೇಂದ್ರದಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಕಿರಿಯ ಲೆಕ್ಕ ಸಹಾಯಕರು, ಗ್ರೂಪ್ ಸಿ ವೃಂದದ ಹದ್ದೆಗಳಿಗೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ಒಬ್ಬರು ಮೇಲ್ವಿಚಾರಕರನ್ನು ಮತ್ತು 1 ಸ್ಥಳೀಯ ನಿರೀಕ್ಷಣಾಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಒಬ್ಬರು ಮಾರ್ಗಾಧಿಕಾರಿಗಳು ಮತ್ತು ಒಬ್ಬರು ವೀಕ್ಷಕರನ್ನು ನೇಮಿಸಲಾಗಿದೆ ಎಂದು ತಿಳಿಸಿದರು.

ಡಿ.17ರಂದು ನಡೆಯುವ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಕಿರಿಯ ಲೆಕ್ಕ ಸಹಾಯಕರು, ಗ್ರೂಪ್ ಸಿ ವೃಂದದ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ರಾಯಚೂರು ತಾಲೂಕಿನ ಒಟ್ಟು 6 ಪರೀಕ್ಷಾ ಕೇಂದ್ರಗಳಿಗೆ ಆರು ಮೇಲ್ವಿಚಾರಕರು ಮತ್ತು 6 ಸ್ಥಳೀಯ ನಿರೀಕ್ಷಣಾಧಿಕಾರಿಗಳು, ಇಬ್ಬರು ಮಾರ್ಗಾಧಿಕಾರಿಗಳು ಮತ್ತು ಇಬ್ಬರು ವೀಕ್ಷಕರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ಪರೀಕ್ಷೆಗಳನ್ನು ನಿಯಮಾನುಸಾರವಾಗಿ ಯಾವುದೇ ಅಕ್ರಮಗಳಾಗದಂತೆ ನಡೆಸಬೇಕು ಮತ್ತು ಪರೀಕ್ಷಾ ಪಾವಿತ್ರ್ಯತೆಗೆ ಧಕ್ಕೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು, ಶೌಚಾಲಯ ಹಾಗೂ ಸ್ವಚ್ಛತೆ ಸೇರಿದಂತೆ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕು ಎಂದು ಸೂಚನೆ ನೀಡಿದರು.

ಪರೀಕ್ಷಾ ಕೇಂದ್ರದ ಸುತ್ತಲೂ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಿ ಭದ್ರತೆ ಒದಗಿಸಬೇಕು, ಪರೀಕ್ಷಾ ಕೇಂದ್ರದ ಒಳಗೆ ಕಡ್ಡಾಯವಾಗಿ ಸಿಸಿ ಕ್ಯಾಮರಾಗಳನ್ನು ಅಳವಡಿಸಬೇಕು, ಪರೀಕ್ಷಾ ಕೇಂದ್ರದ ಒಳಗೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ಕಡ್ಡಾಯವಾಗಿ ನಿಷೇಧಿಸಬೇಕು ಎಂದು ತಿಳಿಸಿದರು.

ಪರೀಕ್ಷಾ ಕೇಂದ್ರಗಳಿಗೆ ನೇಮಕಗೊಂಡ ಮೇಲ್ವಿಚಾರಕರು, ಸ್ಥಳೀಯ ನಿರೀಕ್ಷಣಾಧಿಕಾರಿಗಳು, ಮಾರ್ಗಾಧಿಕಾರಿಗಳು ಹಾಗೂ ವೀಕ್ಷಕರು ಪರೀಕ್ಷೆಗಳನ್ನು ಅಚ್ಚುಕಟ್ಟಾಗಿ ಹಾಗೂ ನಿಯಮಾನುಸಾರವಾಗಿ ನಡೆಸುವಲ್ಲಿ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೆ.ಡಿ ಬಡಿಗೇರ, ಡಯಟ್‌ನ ಹಿರಿಯ ಉಪನ್ಯಾಸಕರಾದ ಮಲ್ಲಿಕಾರ್ಜುನ, ಶಿವಮ್ಮ, ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು, ಸ್ಥಾನಿಕ ಜಾಗೃತದಳದ ಅಧಿಕಾರಿಗಳು, ಮೇಲ್ವಿಚಾರಕರು, ಮಾರ್ಗಾಧಿಕಾರಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

4 ಲಕ್ಷ ರೈತರ ಕೃಷಿಗಳ ಪಂಪ್ ಸೆಟ್‌ಗಳಿಗೆ ಸೌಕರ್ಯ

ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿಕೆ

■ **ಹಂಪಿ ಟೈಮ್ಸ್ ಬೆಳಗಾವಿ**

ರಾಜ್ಯದ 4 ಲಕ್ಷ ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಸರ್ಕಾರದಿಂದ ಮೂಲಭೂತ ಸೌಕರ್ಯ ಕಲ್ಪಿಸಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಬೆಳಗಾವಿ ಚಳಿಗಾಲ ಅಧಿವೇಶನದಲ್ಲಿ ಗುರುವಾರ ವಿಧಾನ ಸಭೆ ಪ್ರಶ್ನೋತ್ತರ ಕಲಾಪದಲ್ಲಿ ಶಾಸಕರ ಪ್ರಶ್ನೆಗಳಿಗೆ ಅವರು ಉತ್ತರಿಸಿದರು.

ನೊಂದಾಯಿಸಲ್ಪಟ್ಟ 500 ಮೀಟರ್ ವ್ಯಾಪ್ತಿಯೊಳಗಡೆ ಇರುವ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳಿಂದ ಮೂಲಭೂತ ಸೌಕರ್ಯ ಕಲ್ಪಿಸಲಾಗುವುದು. 500 ಮೀಟರ್‌ಯಿಂದ ಆಚೆ ಇರುವ ಪಂಪ್ ಸೆಟ್‌ಗಳಿಗೆ ಕೇಂದ್ರ ಸರ್ಕಾರದ ಶೇ.30 ಹಾಗೂ ರಾಜ್ಯ ಸರ್ಕಾರ ಶೇ.50 ರಷ್ಟು ಸಬ್ಸಿಡಿ ನೀಡಿ, ಸೋಲಾರ್ ಪಂಪ್ ಸೆಟ್ ಅಳವಡಿಸಲು ಕ್ರಮವಹಿಸಲಾಗಿದೆ. ದಿನಾಂಕ 22.09.2023ರ ನಂತರ ನೊಂದಾಯಿಸಲ್ಪಡುವ ಐಪಿ ಸೆಟ್‌ಗಳಿಗೆ ಮೂಲಸೌಕರ್ಯಗಳನ್ನು ರೈತರು ಸ್ವಯಂ–ಕಾರ್ಯನಿರ್ವಹಣೆಯಡಿ ತಾವೇ ಮಾಡಿಕೊಳ್ಳಬೇಕು ಎಂಬ ನಿಯಮವಿತ್ತು. ಇದನ್ನು ಮಾರ್ಪಡಿಸಿ ಸರ್ಕಾರವೇ ಮೂಲ ಸೌಕರ್ಯ ಒದಗಿಸುವ ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಸಲ್ಲಿಸಲಾಗಿದೆ ಎಂದರು.

ರಾಜ್ಯದಲ್ಲಿ ಕೃಷಿಗೆ 7 ಗಂಟೆ ವಿದ್ಯುತ್ ನೀಡಲಾಗುತ್ತಿದೆ. ಪ್ರಸಕ್ತ ವರ್ಷದಲ್ಲಿ ಮಳೆ ಕೊರತೆಯಿಂದಾಗಿ ಜಲಮೂಲದಿಂದ ಉತ್ಪತ್ತಿಯಾಗುತ್ತಿದ್ದ ವಿದ್ಯುತ್ ಪ್ರಮಾಣ ಕಡಿಮೆಯಾಗಿದೆ. ಇದರೊಂದಿಗೆ ರಾಜ್ಯದ ವಿದ್ಯುತ್ ಬೇಡಿಕೆ 8000 ಮೆಗಾ ವ್ಯಾಟ್ ನಿಂದ 16500 ಮೆಗಾ ವ್ಯಾಟ್‌ಗೆ ಏರಿಕೆಯಾಗಿ, ವಿದ್ಯುತ್ ಅಭಾವ ಉಂಟಾಗಿತ್ತು. ಹೊರ ರಾಜ್ಯಗಳಿಂದ ಒಪ್ಪಂದ ಮಾಡಿಕೊಂಡು ವಿದ್ಯುತ್ ಖರೀದಿಸಲಾಗಿದೆ. ಇದರೊಂದಿಗೆ ರಾಜ್ಯದ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿಯೂ ಹೆಚ್ಚಿನ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದು, ಸದ್ಯ ರಾಜ್ಯದಲ್ಲಿ ಯಾವುದೇ ವಿದ್ಯುತ್ ಕೊರೆತೆ ಇಲ್ಲ. ಅಗತ್ಯಕ್ಕಿಂತ ಹೆಚ್ಚಿನ ವಿದ್ಯುತ್ ಲಭ್ಯವಿದೆ ಸಚಿವ ಕೆ.ಜೆ.ಜಾರ್ಜ್ ಸ್ಪಷ್ಟಪಡಿಸಿದರು.

2004ರಲ್ಲಿ ಹೆಚ್.ಡಿ.ರೇವಣ್ಣ ಅವರು ಇಂಧನ ಸಚಿವರಿದ್ದಾಗ 60 ಸಾವಿರ ಹಾಗೂ 2008ರಲ್ಲಿ ಶೋಭಾ ಕರಂದ್ಲಾಜೆ ಅವರು ಇಂಧನ ಸಚಿವರಿದ್ದಾಗ 1.50 ಲಕ್ಷ ಕೃಷಿ ಪಂಪ್ ಸೆಟ್‌ಗಳನ್ನು ಅಕ್ರಮ–ಸಕ್ರಮದಡಿ ಕ್ರಮಬದ್ಧಗೊಳಿಸಲು ತೀರ್ಮಾನಿಸಲಾಗಿತ್ತು. ಅಂದಿನಿಂದಲೂ ಸರ್ಕಾರಗಳು ಅನಧಿಕೃತ ಕೃಷಿ ಪಂಪ್ ಸೆಟ್‌ಗಳನ್ನು ಸಕ್ರಮಗೊಳಿಸುವುದನ್ನು ಮುಂದುವರಿಸುಕೊಂಡು ಬಂದಿವೆ. ರಾಜ್ಯದಲ್ಲಿ ವಿದ್ಯುತ್ ಪರಿವರ್ತಕಗಳ ಕೊರತೆ ಇಲ್ಲ. ಹಾನಿಯಾದ ವಿದ್ಯುತ್ ಪರಿವರ್ತಕಗಳನ್ನು ನಿಗದಿತ ಸಮಯದಲ್ಲಿ ಬದಲಾವಣೆ ಮಾಡಿಕೊಡಲಾಗುತ್ತಿದೆ. ಆದರೂ ಕೆಲವು ಕಡೆ ಪರಿವರ್ತಕದ ಸಾಮರ್ಥ್ಯಕ್ಕಿಂತ ಹೆಚ್ಚಿನ ಒತ್ತಡ ಬೀಳುವುದರಿಂದ ಪದೇ ಪದೇ ಪರಿವರ್ತಕಗಳು ಹಾನಿಗೆ ಒಳಗಾಗುತ್ತಿವೆ ಎಂದರು.

ರೈತರು ತಮ್ಮ ಕೃಷಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಳ್ಳಲು ವಿದ್ಯುತ್ ಕಂಬ, ಪರಿವರ್ತಕ, ವಿದ್ಯುತ್ ತಂತಿ ಹಾಗೂ ಸೇವಾ ಶುಲ್ಕಗಳನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ನೀಡಬೇಕು. ಇದಕ್ಕೆ ಸುಮಾರು 2 ರಿಂದ 3 ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಇದು ರೈತರಿಗೆ ಹೊರೆಯಾಗುವುದರಿಂದ ಸರ್ಕಾರಕವೇ ಈ ಎಲ್ಲಾ ವೆಚ್ಚಗಳನ್ನು ಭರಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಬೇಕು ಎಂದು ಕಾಗವಾಡ ಶಾಸಕ ಭರಮಗೌಡ ಅಲಗೌಡ ಕಾಗೆ ಇಂಧನ ಸಚಿವರಲ್ಲಿ ಕೋರಿದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಕ್ರಮ

ಡಿ.ಕೆ.ಶಿವಕುಮಾರ್ ಹೇಳಿಕೆ। ಉಪ ಸಕ್ಷಮ ಪ್ರಾಧಿಕಾರಿಗಳಿಂದ ಅನುಮೋದನೆ ವಹಿಸಲಾಗುವುದು

■ **ಹಂಪಿ ಟೈಮ್ಸ್ ಬೆಳಗಾವಿ**

ಮೇಕೆದಾಟು ಯೋಜನೆಗೆ ಸಕ್ಷಮ ಪ್ರಾಧಿಕಾರಗಳಿಂದ ಅಗತ್ಯ ತೀರುವಳಿ ಅನುಮೋದನೆ ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು ಎಂದು ಉಪ ಮುಖ್ಯಮಂತ್ರಿಗಳಾದ ಡಿ. ಕೆ.ಶಿವಕುಮಾರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸದಸ್ಯ ಟಿ.ಎ.ಶರವಣ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿಗಳು, ಮೇಕೆದಾಟು ಯೋಜನೆಗೆ ಇದುವರೆಗೆ ಯಾವುದೇ ಭೂಮಿ ಯನ್ನು ವಶಪಡಿಸಿಕೊಂಡಿರುವುದಿಲ್ಲ. ಕರ್ನಾಟಕ ಮತ್ತು ತಮಿಳುನಾಡು ಅಂತರ ರಾಜ್ಯ ಗಡಿಯಲ್ಲಿರುವ ಸಿಡಬ್ಲ್ಯೂಸಿ ಬಿಳಿಗುಂಡ್ಲುವಿನಲ್ಲಿ ಜುಲೈ 2023ರಿಂದ ನವೆಂಬರ್ 2023ರವರೆಗೆ 10.658 ಟಿಎಂಸಿ ನೀರನ್ನು ಹರಿಸಲಾಗಿದೆ. ಸಂಕಷ್ಟ ಜಲ ವರ್ಷಗಳಲ್ಲಿ ನೀರಿನ ಹಂಚಿಕೆ ಕುರಿತು ಸೂತ್ರ ರೂಪಿಸುವ ಬಗ್ಗೆ ಕಾವೇರಿ ಜಲ ನಿಯಂತ್ರಣಾ ಸಮಿತಿಯ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ ಸಭೆಗಳಲ್ಲಿ ಚರ್ಚಿಸಲಾಗುತ್ತಿದ್ದು ಸಂಕಷ್ಟ ಹಂಚಿಕೆ ಸೂತ್ರವು ಅಂತಿಮವಾಗಬೇಕಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

ಪ್ರಸ್ತುತ ಜಲವರ್ಷ 2023–24 ಆರಂಭದಿಂದಲೂ ಸಂಕಷ್ಟ ಜಲ ವರ್ಷವಾಗಿದ್ದು ಸಿಡಬ್ಲ್ಯೂಆರ್‌ಸಿ ಹಾಗೂ ಸಿಡಬ್ಲ್ಯುಎಂಎ ಸಭೆಗಳಲ್ಲಿ ಕಾವೇರಿ ಜಲಾನಯನಗಳ ಜಲಾಶಯಗಳಲ್ಲಿ ಕಳೆದ 30 ವರ್ಷಗಳ ಸರಾಸರಿ ಒಳಹರಿವು, ಕಾಲಕಾಲಕ್ಕೆ ಉಂಟಾದ ಮಳೆಯ ಪ್ರಮಾಣ/ಕೊರತೆ, ಕಣಿವೆಯಲ್ಲಿನ ಪ್ರಮುಖ ಜಲಾಶಯಗಳಲ್ಲಿನ ಶೇಖರಣೆ ಒಳಹರಿವು/ಹೊರಹರಿವಿನ ಪರಿಸ್ಥಿತಿ, ಹವಾಮಾನ ವಸ್ತುಸ್ಥಿತಿ, ಮಳೆಯ ಮುನ್ಸೂಚನೆ, ರಾಜ್ಯಗಳಲ್ಲಿನ ಬೆಳೆ ಪ್ರದೇಶ, ನಿಂತ ಬೆಳೆಗಳ ಪರಿಸ್ಥಿತಿ, ಕುಡಿಯುವ ನೀರಿನ ಹಾಗೂ ಕೈಗಾರಿಕಾ ಅವಶ್ಯಕತೆಗಳು, ಇತ್ಯಾದಿ ಅಂಶಗಳ ಪರಿಶೀಲನೆ ನಡೆಸಿ ರಾಜ್ಯದ ಜಲಾಶಯಗಳಲ್ಲಿನ ಒಳಹರಿವಿನ ಕೊರತೆಯನ್ನು ಪರಿಗಣಿಸಿ ಅಂತರ ರಾಜ್ಯ ಗಡಿಯಲ್ಲಿರುವ ಡಿಡಬ್ಲ್ಯೂಸಿ ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ತಮಿಳುನಾಡು ರಾಜ್ಯಕ್ಕೆ ಹರಿಸಬೇಕಾದ ನೀರಿನ ಪ್ರಮಾಣಗಳ ಬಗ್ಗೆ ನಿರ್ದೇಶನಗಳನ್ನು ನೀಡಲಾಗಿದೆ ಎಂದು ಅವರು ತಿಳಿಸಿದರು.

ತಮಿಳುನಾಡು ರಾಜ್ಯವು ಪ್ರಸ್ತಕ ಜಲವರ್ಷ 2023–24ನೇ ಜಲವರ್ಷದಲ್ಲಿ ನ್ಯಾಯಾಧೀಕರಣದ ಆದೇಶದನ್ವಯ ತಮಿಳುನಾಡು ರಾಜ್ಯಕ್ಕೆ ಹರಿಯಬೇಕಿದ್ದ ಬಾಕಿ ನೀರಿನ ಪ್ರಮಾಣದ ಕುರಿತು 2023ರ ಆಗಸ್ಟ್ 14ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿತು. ಈ ಅರ್ಜಿಗೆ ಕರ್ನಾಟಕ ರಾಜ್ಯವು 2023ರ ಆಗಸ್ಟ್ 23ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಪ್ರತಿ ಪ್ರಮಾಣ ಪತ್ರದಲ್ಲಿ ಪ್ರಸ್ತುತ ಜಲವರ್ಷ 2023–24 ಆರಂಭದಿಂದಲೂ ಸಂಕಷ್ಟ ವರ್ಷವಾಗಿದ್ದರೂ ಸಹ ಸರ್ವೋಚ್ಚ ನ್ಯಾಯಾಲಯದ 2018ರ ಆದೇಶದಲ್ಲಿ ಮಾರ್ಪಡಿಸಿರುವಂತೆ ಕಾವೇರಿ ಜಲ ವಿವಾದ ನ್ಯಾಯಾಧೀಕರಣ ಆದೇಶದಲ್ಲಿ ಸಾಮಾನ್ಯ ಜಲ ವರ್ಷಕ್ಕೆ ನಿಗದಿಪಡಿಸಿರುವ ಪ್ರಮಾಣದಂತೆ ನೀರು ಹರಿಸಬೇಕೆಂದು ತಮಿಳುನಾಡು ರಾಜ್ಯವು ಕೋರಿರುವುದನ್ನು ರಾಜ್ಯವು ವಿರೋಧಿಸಿರುತ್ತದೆ.

ಈ ಪ್ರಕರಣದಲ್ಲಿ ಕರ್ನಾಟಕ ರಾಜ್ಯವು ಸಹ ಅರ್ಜಿಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದೆ. ರಾಜ್ಯದ ಕಾನೂನು ತಂಡವು ನ್ಯಾಯಾಲಯದಲ್ಲಿ ರಾಜ್ಯದ ಪ್ರಸ್ತುತ ಜಲ ಸಂಕಷ್ಟದ ಕುರಿತು ಪ್ರತಿಪಾದಿಸಿದೆ. ಕರ್ನಾಟಕದ ಜಲಾಯಶಯಗಳಲ್ಲಿ ಕಡಿಮೆ ಪ್ರಮಾಣದ ನೀರಿನ ಶೇಖರಣೆ ಹಾಗೂ ಕಡಿಮೆ ಒಳ ಹರಿವು ಸೇರಿದಂತೆ ಹಲವು ಅಂಶಗಳನ್ನು ರಾಜ್ಯವು ನ್ಯಾಯಾಲಯದ ಮುಂದೆ ಪ್ರತಿಪಾದಿಸಿದೆ.

ಕೇಂದ್ರ ಸರ್ಕಾರ ಹಾಗೂ ರಾಜ್ಯಗಳು ಮಂಡಿಸಿದ ವಾದಗಳನ್ನು ಆಲಿಸಿ ಸಿಡಬ್ಲ್ಯೂಆರ್‌ಸಿ ಸಿಡಬ್ಲ್ಯೂಎಂಎ ಇವುಗಳಲ್ಲಿ ನೀರಾವರಿ ಕೃಷಿ ಇತ್ಯಾದಿ ವಿಷಯಗಳಲ್ಲಿ ಪರಿಣಿತರು ಇರುವುದನ್ನು ಉಲ್ಲೇಖಿಸಿ ಅದರ ನಿರ್ದೇಶನಗಳನ್ನು ನಿರಾಕರಿಸಲು ಕಾರಣವಿಲ್ಲವೆಂದು ಹಾಗೂ ಸಿಡಬ್ಲ್ಯೂಎಂಎ ನಿರ್ದೇಶನಗಳನ್ನು ಕರ್ನಾಟಕವು ಪಾಲಿಸಿದೆ ಎಂದು ಸಿಡಬ್ಲ್ಯೂಎಂಯು ಸಲ್ಲಿಸಿದ ಅಫಿಡವಿಟ್‌ನಲ್ಲಿಯ ಅಂಶಗಳನ್ನು ಪರಿಗಣಿಸಿ ಸರ್ವೋಚ್ಚ ನ್ಯಾಯಾಲಯವು 2023ರ ಸೆಪ್ಟೆಂಬರ್ 21ರಂದು ಆದೇಶದಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ತಮಿಳುನಾಡು ರಾಜ್ಯದ ಅರ್ಜಿಯನ್ನು ತಿರಸ್ಕರಿಸಿ ಇತ್ಯರ್ಥಗೊಳಿಸಿದೆ ಎಂದು ಉಪ ಮುಖ್ಯಮಂತ್ರಿಗಳು ತಿಳಿಸಿದರು.

ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿ ನಿಷೇಧಾಜ್ಞೆ ಜಾರಿ

■ **ಹಂಪಿ ಟೈಮ್ಸ್ ಬ

ಸಣ್ಣ ಬದಲಾವಣೆ ದೊಡ್ಡ ಪರಿವರ್ತನೆ

ಜೆ.ಎಸ್.ಡಬ್ಲ್ಯು ಎನರ್ಜಿ ಲಿಮಿಟೆಡ್ ಕಂಪನಿಯ ಮ್ಯಾನೇಜರ್ ಶಾದಾಬ್ ಖಾನ್ ಹೇಳಿಕೆ । ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ

■ ಹಂಪಿ ಟೈಮ್ಸ್ ಬಳ್ಳಾರಿ

ನವೀಕರಿಸಲಾಗದ ನೈಸರ್ಗಿಕ ಶಕ್ತಿ ಮೂಲಗಳ ಅಪಬಳಕೆಯನ್ನು ತಪ್ಪಿಸಿ, ಭವಿಷ್ಯಕ್ಕಾಗಿ ಸಂಪನ್ಮೂಲಗಳನ್ನು ಉಳಿಸಬೇಕು. ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಎಲ್ಲರ ಹೊಣೆ" ಎಂದು ತೋರಣಗಲ್ಲಿನ ಜೆ.ಎಸ್.ಡಬ್ಲ್ಯು ಎನರ್ಜಿ ಲಿಮಿಟೆಡ್ ಕಂಪನಿಯ ಮ್ಯಾನೇಜರ್ ಶಾದಾಬ್ ಖಾನ್ ಹೇಳಿದರು.

ಅವರು ಮುನಿರಾಬಾದಿನ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಕೇಂದ್ರ ಹಾಗೂ ಬಳ್ಳಾರಿಯ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ಇಂಜಿನಿಯರಿಂಗ್ ಕಾಲೇಜುಗಳು ಸಂಯುಕ್ತವಾಗಿ ಆರ್.ವೈ.ಎಂ.ಈ.ಸಿ. ಕಾಲೇಜಿನಲ್ಲಿ ಗುರುವಾರ ಕಾಲೇಜಿನಲ್ಲಿ ಆಯೋಜಿಸಿದ್ದ 'ರಾಷ್ಟ್ರೀಯ ಶಕ್ತಿ ಸಂರಕ್ಷಣಾ ದಿನಾಚರಣೆ' ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

'ನಾವು ಈಗ ಬಳಸುವ ಪ್ರಾಥಮಿಕ ಶಕ್ತಿಯ ಮೂಲವು ಪಳೆಯುಳಿಕೆ ಇಂಧನಗಳು; ಕಲ್ಲಿದ್ದಲು, ನೈಸರ್ಗಿಕ ಅನಿಲ ಇತ್ಯಾದಿಗಳಿಂದ ಬರುತ್ತದೆ, ಅದು ರೂಪುಗೊಳ್ಳಲು ಲಕ್ಷಾಂತರ ವರ್ಷಗಳನ್ನು ತೆಗೆದುಕೊಳ್ಳುತ್ತದೆ.ಅವುಗಳನ್ನುನವೀಕರಿಸಲಾಗುವುದಿಲ್ಲ. ಆದ್ದರಿಂದ, ನಾವು ಸೌರಶಕ್ತಿ, ಪವನ ಶಕ್ತಿ, ಜಲಶಕ್ತಿ, ಭೂಶಾಖದ ಶಕ್ತಿ, ಜೀವರಾಶಿ ಶಕ್ತಿ ಮುಂತಾದ ನವೀಕರಿಸಬಹುದಾದ ಸಂಪನ್ಮೂಲಗಳಿಂದ ಶಕ್ತಿಯನ್ನು ಉತ್ಪಾದಿಸುವುದು ಅನಿವಾರ್ಯವಾಗಿದೆ' ಎಂದು ಶಾದಾಬ್ ಖಾನ್ ಹೇಳಿದರು.

ನಮ್ಮ ದೈನಂದಿನ ಜೀವನದಲ್ಲಿ ಸಣ್ಣ ಬದಲಾವಣೆಗಳನ್ನು ಅಳವಡಿಸಿಕೊಳ್ಳುವುದರ ಮೂಲಕ, ವಿಶ್ವದಲ್ಲಿ ನಾವು ದೊಡ್ಡ ಪರಿವರ್ತನೆಯನ್ನು. ಅನುಷ್ಠಾನಕ್ಕೆ ತರಬಹುದು. ಲೈಟ್ಗಳು, ಫ್ಯಾನ್ಗಳು, ಏರ್ ಕಂಡಿಷನರ್ಗಳು ಮತ್ತು ಇತರ ಎಲೆಕ್ಟ್ರಾನಿಕ್ ಉಪಕರಣಗಳ ಅನಗತ್ಯ ಬಳಕೆಯನ್ನು ತಪ್ಪಿಸುವ ಮೂಲಕ ಪ್ರತಿಯೊಬ್ಬ ವ್ಯಕ್ತಿಯು ತಮ್ಮ ಕೆಲಸವನ್ನು ಮಾಡಬಹುದು. ರಾಷ್ಟ್ರೀಯ ಶಕ್ತಿ ಸಂರಕ್ಷಣಾ ದಿನದ ಆಚರಣೆಯ ಹಿಂದಿನ ಮುಖ್ಯ ಉದ್ದೇಶವೆಂದರೆ ಜನರು ಶಕ್ತಿಯ ಸಮರ್ಥ ಬಳಕೆ ಮತ್ತು ಅದರ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಲು ಮತ್ತು ತಮ್ಮ ಜೀವನಶೈಲಿಯ ಬಗ್ಗೆ ಹೆಚ್ಚು ಜಾಗೃತರಾಗುವಂತೆ ಮಾಡುವುದು ಎಂದು ಶಾದಾಬ್ ಖಾನ್ ಹೇಳಿದರು.

ಇದೇ ಕಾರ್ಯಕ್ರಮದಲ್ಲಿ ಮುನಿರಾಬಾದಿನ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ನೂತನ ಜಾಲತಾಣವನ್ನು ಲೋಕಾರ್ಪಣೆ ಮಾಡಲಾಯಿತು. ಸಮಾರಂಭದಲ್ಲಿ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷರು ಡಾ.ಎಸ್.ಎಂ.ಶಶಿಧರ್ ಮಾತನಾಡಿ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ ಸಂಸ್ಥೆಯು ಕರ್ನಾಟಕದ 10 ಪ್ರತಿಷ್ಠಿತ ಕೇಂದ್ರಗಳಲ್ಲಿ ಒಂದಾಗಿದ್ದು, 750ಕ್ಕೂ ಹೆಚ್ಚು ವೃತ್ತಿಪರ ಇಂಜಿನಿಯರ್ಗಳ ಸಮಾಜಮುಖಿ ಸಂಸ್ಥೆಯಾಗಿದೆ ಎಂದರು. ಉಪ-ಪ್ರಾಂಶುಪಾಲರಾದ ಡಾ. ಸವಿತಾ ಸೋನೋಲಿ ಮಾತನಾಡಿದರು. ಆರ್.ವೈ.ಎಂ.ಈ.ಸಿ. ಪ್ರಾಂಶುಪಾಲ ಡಾ.ಟಿ.ಹನುಮಂತ ರೆಡ್ಡಿ, ಮಾತನಾಡಿ ಒಂದು ಯೂನಿಟ್ ವಿದ್ಯುತ್ ಉಳಿತಾಯ ಎರಡು ಯುನಿಟ್ ವಿದ್ಯುತ್ ಉತ್ಪಾದನೆಗೆ ಸಮಾನ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಮುಖ್ಯ ಅತಿಥಿ ಶಾದಾಬ್ ಹಾಗೂ ಡಾ ಶಶಿಧರ ಅವರನ್ನು ಗೌರವಿಸಲಾಯಿತು.

ಶಕ್ತಿ ಸಂರಕ್ಷಣೆಯ ಜಾಗೃತಿಯ ಬಗೆಗೆ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ರಂಗೋಲಿ, ಪೋಸ್ಟರ್ ಹಾಗೂ ಪೇಂಟಿಂಗ್ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕು. ಅಪೂರ್ವ ಪ್ರಾರ್ಥನೆ ಸಲ್ಲಿಸಿದರು. ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರಾದ ಡಾ. ಕೋರಿ ನಾಗರಾಜ್ ಸ್ವಾಗತ ಕೋರಿದರು. ಡಾ. ವೀರಭದ್ರಪ್ಪ ಆಲಗೂರ್ ಪ್ರಸ್ತಾವಿಕವಾಗಿ ಮಾತನಾಡಿದರು. ಪ್ರೊ. ಅಚ್ಯುತಾನಂದ ಮತ್ತು ಬಸವರಾಜ್ ಅತಿಥಿಗಳ ಪರಿಚಯ ಮಾಡಿದರು ಮತ್ತು ಪ್ರಾಧ್ಯಾಪಕ ಡಾ. ಎಂ. ಚಂದ್ರಗೌಡ ಕಾರ್ಯಕ್ರಮ ನಿರೂಪಿಸಿದರು. ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ನ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಆರ್.ವೈ. ಎಂ.ಈ.ಸಿ. ಸಿಬ್ಬಂದಿ ಮತ್ತು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೈಕ್ರೋ ನ್ಯೂಸ್

ಡಿ.18 ಅಂಚೆ ಇಲಾಖೆಯ ನಿವೃತ್ತ ಪಿಂಚಣಿದಾರರಿಗಾಗಿ ಪಿಂಚಣಿ ಅದಾಲತ್

ಹಂಪಿ ಟೈಮ್ಸ್ ಬಳ್ಳಾರಿ

ಅಂಚೆ ಇಲಾಖೆಯಿಂದ ನಿವೃತ್ತರಾದ ಸರ್ಕಾರದಿಂದ ಪಿಂಚಣಿ ಪಡೆಯುತ್ತಿರುವ ಇಲಾಖಾ ನೌಕರರಿಗಾಗಿ ಮತ್ತು ಕುಟುಂಬ ಪಿಂಚಣಿ ಪಡೆಯುತ್ತಿರುವ ನಿವೃತ್ತ ಅಂಚೆ ನೌಕರರ ಕುಟುಂಬದವರಿಗಾಗಿ ಡಿ.18ರಂದು ಸಂಜೆ 4ಕ್ಕೆ ಬಳ್ಳಾರಿ ವಿಭಾಗ ಅಂಚೆ ಕಚೇರಿಯಲ್ಲಿ ಪಿಂಚಣಿ ಅದಾಲತ್ ಆಯೋಜಿಸಲಾಗಿದೆ.

ಪಿಂಚಣಿದಾರರು ತಮ್ಮ ಕುಂದು-ಕೊರತೆಗಳಿದ್ದರೆ ಅಂಚೆ ಅಧೀಕ್ಷಕರು, ಬಳ್ಳಾರಿ ವಿಭಾಗ, ವಿಭಾಗೀಯ ಕಾರ್ಯಾಲಯ ಕೋಟೆ, ಬಳ್ಳಾರಿ, ಅವರಿಗೆ ಡಿ.18 ಮುಂಚಿತವಾಗಿ ತಲಪುವಂತೆ ಪತ್ರ ಮುಖೇನ ಅಥವಾ doballari.ka@indiapost.gov.in ಗೆ ಇ-ಮೇಲ್ ಮುಖಾಂತರ ಕಳುಹಿಸಿಕೊಡಬಹುದು ಎಂದು ಬಳ್ಳಾರಿ ವಿಭಾಗ ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.

ಡಿ.16ರಂದು ವಿದ್ಯುತ್ ಗ್ರಾಹಕರ ಕುಂದುಕೊರತೆ ಸಭೆ

ಹಂಪಿ ಟೈಮ್ಸ್ ಬಳ್ಳಾರಿ

ಸಿರುಗುಪ್ಪ ಜೆಸ್ಕಾಂ ಉಪವಿಭಾಗದ ಕಚೇರಿ ವ್ಯಾಪ್ತಿಗೆ ಬರುವ ವಿದ್ಯುತ್ ಗ್ರಾಹಕರಿಗೆ ಇರುವಂತಹ ಸಮಸ್ಯೆಗಳನ್ನು ನಿವಾರಿಸಲು ಡಿ.16ರಂದು ಸಿರುಗುಪ್ಪ ಉಪವಿಭಾಗ ಕಚೇರಿಯಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ವಿದ್ಯುತ್ ಗ್ರಾಹಕರ ಕುಂದುಕೊರತೆ ಮತ್ತು ಎಸ್ಒಪಿ ಕುರಿತು ಜಾಗೃತಿ ಮೂಡಿಸುವ ಸಭೆ ಏರ್ಪಡಿಸಲಾಗಿದೆ.

ಸಿರುಗುಪ್ಪ ಜೆಸ್ಕಾಂ ವ್ಯಾಪ್ತಿಗೆ ಸಂಬಂಧಿಸಿದಂತೆ ಸಮಸ್ಯೆ ಇರುವಂತಹ ವಿದ್ಯುತ್ ಗ್ರಾಹಕರು ಸಭೆಗೆ ಹಾಜರಾಗಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಸಿರುಗುಪ್ಪ ಜೆಸ್ಕಾಂನ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಡಿ.18 ವಿದ್ಯುತ್ ವ್ಯತ್ಯಯ

ಹಂಪಿ ಟೈಮ್ಸ್ ಬಳ್ಳಾರಿ

ಸಿರುಗುಪ್ಪ ಜೆಸ್ಕಾಂ ಉಪವಿಭಾಗ ವ್ಯಾಪ್ತಿಗೆ ಬರುವ 33/11 ಕೆ.ವಿ ತೆಕ್ಕಲಕೋಟೆ ಮತ್ತು ಕರೂರು ವಿದ್ಯುತ್ ವಿತರಣಾ ಕೇಂದ್ರದ ಮಾರ್ಗದ ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ಡಿ.18ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸಹಾಯಕ ಇಂಜಿನಿಯರ್ ಅವರು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು

33/11 ಕೆ.ವಿ ತೆಕ್ಕಲಕೋಟೆ ಕೇಂದ್ರ, ಬಲಕುಂದಿ, ಉಡೆಗೋಳ, ಹಳೆಕೋಟೆ ಮತ್ತು ತೆಕ್ಕಲಕೋಟೆ ಪಟ್ಟಣ, 33/11 ಕೆ.ವಿ ಕರೂರು ಕೇಂದ್ರ, ದಾರೂರು, ಕರೂರು, ಗೋಸುಬಾಳೆ, ಮಾಟಸುಗುರ್, ಉತ್ತನೂರು ಇನ್ನೂ ಮುಂತಾದ ಗ್ರಾಮಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ವಿದ್ಯುತ್ ಗ್ರಾಹಕರು ಹಾಗೂ ಸಾರ್ವಜನಿಕರು ಸಹಕರಿಬೇಕು ಎಂದು ತಿಳಿಸಿದ್ದಾರೆ.

ನಿಮ್ಮ ಹೊಸ ಹೊಸ ಉತ್ಪನ್ನಗಳು, ವಿಶೇಷ ಕೊಡುಗೆಗಳು ಮತ್ತು ಕಾಲೇಜು ಪ್ರವೇಶ ಕುರಿತು ನಿಮ್ಮ ಗ್ರಾಹಕರಿಗೆ ಮಾಹಿತಿ ನೀಡಲು ಬಯಸಿದ್ದೀರಾ? ಇಂದೇ ಸಂಪರ್ಕಿಸಿ: ಹಂಪಿ ಟೈಮ್ಸ್ : ಮೊ: 9448633038

ನೀರಿನ ಸಮಸ್ಯೆ ಪರಿಹಾರಕ್ಕೆ ಕ್ರಮ

ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಈರಣ್ಣ ಬಿರಾದಾರ ಭರವಸೆ

■ ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ:

ಪಟ್ಟಣದ ಕೆಲ ವಾರ್ಡುಗಳ್ಲಿ ನೀರಿನ ಸಮಸ್ಯೆ ಉಲ್ಬಣಿಸಿದ ಹಿನ್ನೆಲೆಯಲ್ಲಿ ಬುಧವಾರ ಜಿಲ್ಲಾಮಟ್ಟದ ಅಧಿಕಾರಿಗಳು ಪಟ್ಟಣಕ್ಕೆ ಭೇಟಿನೀಡಿ ಪರಿಶೀಲಿಸಿದರು. ಕಳೆದ ಒಂದು ತಿಂಗಳಿಂದ ಜನರಿಗೆ ಕುಡಿವ ನೀರು ಪೂರೈಕೆಯಾಗುತ್ತಿಲ್ಲ. 1, 2, 15ನೇ ವಾರ್ಡ್ ಗಳಿಗೆ ಬಿಡಬೇಕೆಂದು, 2 ಲಕ್ಷ ಲೀಟರ್ ಟ್ಯಾಂಕ್ ತುಂಬಿಸಿದ್ದ ನೀರನ್ನು, ಬೆಳಗಾಗುವಷ್ಟರಲ್ಲಿ ಖಾಲಿಯಾಗಿದ್ದನ್ನು ಕಂಡು ಆಕ್ರೋಶಗೊಂಡ ಸಾರ್ವಜನಿಕರು, ಸೋಮವಾರ ಧಿಢೀರನೆ ಪಟ್ಟಣ ಪಂಚಾಯಿತಿಗೆ ಮುತ್ತಿಗೆಹಾಕಿ, ಅಧಿಕಾರಿಗಳನ್ನು ಮತ್ತು ವಾಟರ್ ಮ್ಯಾನ್ ಗಳನ್ನು 2ಲಕ್ಷ ಲೀಟರ್ ಟ್ಯಾಂಕ್ ನೀರು ಎಲ್ಲಿ ಹೋದವು ಎಂದು ತರಾಟೆಗೆ ತೆಗೆದುಕೊಂಡಿದ್ದರು.

ಈ ಹಿನ್ನೆಲೆಯಲ್ಲಿ ಪ್ರಭಾರ ಜಿಲ್ಲಾ ಯೋಜನಾ ನಿರ್ದೇಶಕ ಈರಣ್ಣ ಬಿರಾದಾರ, 3 ವಾರ್ಡುಗಳ ನಿವಾಸಿಗಳಿಂದ ಸಮಸ್ಯೆಯನ್ನಾಲಿಸಿ ನೀರನ್ನು ಸಮರ್ಪಕವಾಗಿ ಬಿಡಲು ಮುಖ್ಯಾಧಿಕಾರಿ, ಇಂಜಿನಿಯರ್, ಮತ್ತು ವಾಟರ್ ಮ್ಯಾನ್ಗಳಿಗೆ ಸೂಚಿಸಿದರು. ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಈರಣ್ಣ ಬಿರಾದಾರ ಸುದ್ದಿಗಾರರೊಂದಿಗೆ ಮಾತನಾಡಿ, ಅಮೃತ್-02 ಯೋಜನೆಯಲ್ಲಿ ಪಟ್ಟಣದ ಕುಡಿವ ನೀರಿನ ಯೋಜನೆಯ ಟೆಂಡರ್ ಪ್ರಕ್ರಿಯೆ ಮುಗಿದಿದೆ.ಕಾಮಗಾರಿಗೆ ಚಾಲನೆ ನೀಡಬೇಕಿದೆ. ಆ ಕಾಮಗಾರಿ ಪ್ರಾರಂಭವಾಗಿ 1-2 ವರ್ಷ ಬೇಕಾಗುತ್ತದೆ. ಅಲ್ಲಿಯವರೆಗೆ ಪರ್ಯಾಯಾವಾಗಿ ಜನರಿಗೆ ನೀರು ಕೊಡಬೇಕಿದೆ ಇನ್ನರೆಡು ದಿನಗಳಲ್ಲಿ ಪಟ್ಟಣದ ನೀರಿನ ಸಮಸ್ಯೆ ಪರಿಹರಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಪ.ಪಂ.ಮುಖ್ಯಾಧಿಕಾರಿ ಗಾದಿಲಿಂಗನಗೌಡ, ಸಹಾಯಕ ಕಾರ್ಯಪಾಲಕ ಅಭಿಯಂತ ಮಲ್ಲಿಕಾರ್ಜುನಪಾಟೀಲ್, ಎಂಜಿನೀಯರ್ ಹುಸೇನ್ ಬಾಷ, ಸ್ಥಳೀಯ ಮುಖಂಡರಾದ ಎಲ್. ನಾಗರಾಜ್, ಪ.ಪಂ. ಸದಸ್ಯ ಎಲ್. ವಸಂತ್,ಮಾದೂರು ದುರುಗಪ್ಪ, ಮಾಳಗಿ ಗಂಗಾಧರ್, ಮಂಜುನಾಥ, ಗಾಳೆಪ್ಪ, ಕುಮಾರ್, ಗಾಳೆಪ್ಪ ಸೇರಿದಂತೆ ಇತರರಿದ್ದರು.

ಅನಾಮಧೇಯ ಶವ ಪತ್ತೆ; ಪ್ರಕರಣ ದಾಖಲು

■ ಹಂಪಿ ಟೈಮ್ಸ್ ಹೊಸಪೇಟೆ

ಕಮಲಾಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸುಮಾರು 50 ರಿಂದ 55 ವರ್ಷದ ಅನಾಮಧೇಯ ಶವ ಪತ್ತೆಯಾಗಿರುವ ಕುರಿತು ಪ್ರಕರಣ ದಾಖಲಾಗಿದೆ ಎಂದು ಎಎಸ್ಐ ತಿಪ್ಪೇಸ್ವಾಮಿ ಅವರು ತಿಳಿಸಿದ್ದಾರೆ.

ಚಹರೆ: 5.6 ಅಡಿ ಎತ್ತರ, ಚರ್ಮ ಕೊಳೆತು ಹೋಗಿದ್ದು, ಬಿಳಿ ಬಣ್ಣದ ತುಂಬು ತೋಳಿನ ಅಂಗಿ, ನಶಿಪುಡಿ ಬಣ್ಣದ ಚಡ್ಡಿ ಧರಿಸಿರುತ್ತಾನೆ. ಬಲ ಗೈನ ಮುಂಗೈ ಮೇಲೆ ಕೀಷ್ಣಪ ಅಂತಾ ಅಚ್ಚೆ ಗುರುತು ಇರುತ್ತದೆ.

ಈ ಮೇಲ್ಕಂಡ ಚಹರೆಯುಳ್ಳ ಮೃತ ವ್ಯಕ್ತಿಯ ಅಥವಾ ವಾರಸುದಾರರ ಮಾಹಿತಿ ಸಿಕ್ಕಲ್ಲಿ ವಿಜಯನಗರ ಕಂಟ್ರೋಲ್ ರೂಂ ಮೊ: 9480805700, ಹೊಸಪೇಟೆ ಡಿಎಸ್ಪಿ ಕಚೇರಿ ದೂ: 08394-224204, ಹಂಪಿ ಸಿಪಿಐ ಕಚೇರಿ ದೂ: 08394-241530, ಕಮಲಾಪುರ ಪಿಎಸ್ಐ ಠಾಣೆಯ ದೂ: 08394-241240, ಮೊ: 9480805763 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

ಬಲಿಜ ಸಂಘದಿಂದ ಕ್ಯಾಲೆಂಡರ್ ಬಿಡುಗಡೆ

■ ಹಂಪಿ ಟೈಮ್ಸ್ ಹೊಸಪೇಟೆ:

ಹೊಸಪೇಟೆ ತಾಲೂಕು ಬಲಿಜ ಸಂಘ ನೂತನ ವರ್ಷ 2024ರ ಕ್ಯಾಲೇಂಡರ್ನ್ನು ಬುಧವಾರ ನಗರದ ಬಲಿಜ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಬಿಡುಗಡೆಗೊಳಿಸಲಾಯಿತು.

ಬಿಡುಗಡೆ ಸಮಾರಂಭದಲ್ಲಿ ಸಂಘದ ಗೌರವಾಧ್ಯಕ್ಷ ಕೆ.ಶಿವಾನಂದ, ಅಧ್ಯಕ್ಷರು ಟಿ.ರವಿಕುಮಾರ, ಕಾರ್ಯಾಧ್ಯಕ್ಷ ಎನ್.ಟಿ.ರಾಜು, ಪ್ರಧಾನ ಕಾರ್ಯದರ್ಶಿ ಜಿ. ರಾಜೇಂದ್ರ, ಉಪಾಧ್ಯಕ್ಷ ಟಿ.ಎಲ್. ಯೋಗಾನಂದ, ಕೋಶಾಧ್ಯಕ್ಷ ಜಿ.ಪಾಂಡುರಂಗ ಮಹಿಳಾ ಘಟಕದ ಅಧ್ಯಕ್ಷೆ ಭಾರತೀಲೋಕೇಶ್, ರೋಜಾಮಣಿ, ಸುಮಿತ್ರಾ ಸೇರಿದಂತ ಪದಾಧಿಕಾರಿಗಳಾದ ಟಿ.ಶ್ರೀನಿವಾಸ, ಕೆ.ಬಿ.ದುರ್ಗಾಪ್ರಸಾದ್, ಶಿವಶಂಕರ, ಎಸ್.ವೇಣುಗೋಪಾಲ, ರಾಮಕೃಷ್ಣ, ಕೋದಂಡ ಪಾಣಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA